# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:ಮಂಡ್ಯ ವಿಭಾಗ: ಮಂಡ್ಯ

ಸಂ:ಕರಾರ:ಮಂ.ವಿ:ಸಂಚಾರ:ವಾಣಿಜ್ಯ:380:2023–24 ದಿನಾಂಕ:01.09.2023

:ಸಂಧಾನ ಪ್ರಕಟಣೆ ಸಂ: 08:2023–24

(ಜಾಹೀರಾತು ಫಲಕಗಳನ್ನು ಅಳವಡಿಸಲು)

****

ಕ.ರಾ.ರ.ಸಾ.ನಿಗಮದ ಮಂಡ್ಯ ವಿಭಾಗದ ವ್ಯಾಪ್ತಿಯ ಬಸ್ಸು ನಿಲ್ದಾಣ/ಘಟಕಗಳಲ್ಲಿ ಜಾಹೀರಾತು ಫಲಕಗಳನ್ನು ಅಳವಡಿಸಲು ಪ್ಯಾಕೇಜ್‌ವಾರು ಐದು(05) ವರ್ಷದ ಅವಧಿಗೆ ಪರವಾನಿಗೆದಾರರನ್ನು ಆಯ್ಕೆ ಮಾಡಲು ಸಂಧಾನದ ಮೂಲಕ ಸಂಧಾನ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸಂಧಾನದ ದಸ್ತಾವೇಜುಗಳನ್ನು ನಿಗಮದ ವೆಬ್‌ಸೈಟ್ "http://ksrtc.karnataka.gov.in"ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಅಥವಾ ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ ಮಂಡ್ಯ ವಿಭಾಗ, ಮಂಡ್ಯ ಇಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ–7760990652, 7760990661, 7337680837 ವಿವರಗಳು ಕೆಳಕಂಡಂತಿದೆ.

**ಮಂಡ್ಯ ಬಸ್ ನಿಲ್ದಾಣದ ಹೊರ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್ –01**

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ(ಜಿಎಸ್‌ಟಿ ಸೇರಿ) |
|---|---|---|---|---|---|---|---|---|---|
| ಅ.ಹೋರ್ಡಿಂಗ್ಸ್ | ಮಂಡ್ಯ | ಮಂಡ್ಯ ಬಸ್ ನಿಲ್ದಾಣ(ಮೈಸೂರು ಕಡೆಯಿಂದ ವಾಹನ ಪ್ರವೇಶಿಸುವ ಪ್ರವೇಶ ದ್ವಾರದ ಕಡೆ ದ್ವಿ–ಚಕ್ರವಾಹನದ ಸ್ತಳದ ಖಾಲಿ ಸ್ಥಳದಲ್ಲಿ 2 ಸಂಖ್ಯೆ & ಪಾಂಡವಪುರ ಬಸ್ ನಿಲುಗಡೆಯ ಶೆಲ್ಟರ್ ಅಕ್ಕ–ಪಕ್ಕದಲ್ಲಿ –02 ಸಂಖ್ಯೆ & ಬೆಂಗಳೂರು ಕಡೆ ವಾಹನ ಹೋಗುವ ದ್ವಾರದ ಕಡೆ –01 ಸಂಖ್ಯೆ) | 5 | 20'*10' | 200 | 1000 | - | 60408 | 562 |
| ಆ. ಆರ್ಚ್ | ಮಂಡ್ಯ | ಮಂಡ್ಯ ಬಸ್ ನಿಲ್ದಾಣ ವಾಹನಗಳು ಒಳ ಬರುವ ಪ್ರವೇಶ ದ್ವಾರ(ಮೈಸೂರು ಕಡೆಯಿಂದ) | 1 | v:2*3*12=72 h:1*4*68=272 | 344 | 688 | - | 82429 | |
| | | ಮಂಡ್ಯ ಬಸ್ ನಿಲ್ದಾಣ ವಾಹನಗಳು ಹೊರ ಹೋಗುವ ಪ್ರವೇಶ ದ್ವಾರ(ಬೆಂಗಳೂರು ಕಡೆ) | 1 | v:2*3*12=72 h:1*4*68=272 | 344 | | | | |
| ಒಟ್ಟು | | | 7 | | | 1688 | - | 142837 | |

**ಮದ್ದೂರು ಬಸ್ ನಿಲ್ದಾಣದ ಹೊರ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್ –02**

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ(ಜಿಎಸ್‌ಟಿ ಸೇರಿ) |
|---|---|---|---|---|---|---|---|---|---|
| ಅ.ಹೋರ್ಡಿಂಗ್ಸ್ | ಮದ್ದೂರು | ಮದ್ದೂರು ಬಸ್ ನಿಲ್ದಾಣ (ಶೌಚಾಲಯ ಕಟ್ಟಡದ ಪಕ್ಕದಲ್ಲಿ–01 & ಹಲಗೂರು ಪ್ಲಾಟ್‌ಫಾರಂ ಕಡೆ ಕಾಂಪೌಂಡ್ ಪಕ್ಕದಲ್ಲಿ) | 3 | 20'*10' | 200 | 600 | - | 23890 | 118 |

ಮಳವಳ್ಳಿ ಬಸ್ ನಿಲ್ದಾಣದ ಹೊರ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್-03

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ(ಜಿಎಸ್‌ಟಿ ಸೇರಿ) |
|---|---|---|---|---|---|---|---|---|---|
| ಅ.ಹೋರ್ಡಿಂಗ್ಸ್ | ಮಳವಳ್ಳಿ | ಮಳವಳ್ಳಿ ಬಸ್ ನಿಲ್ದಾಣ(ಮೈಸೂರು ಕಡೆಯಿಂದ ವಾಹನಗಳು ಒಳಗೆ ಪ್ರವೇಶಿಸುವ ಬಲಭಾಗದ ಕಡೆ) | 4 | 20'*10' | 200 | 800 | - | 31838 | 243 |
| ಆ.ಯೂನಿಪೋಲ್ಸ್ | ಮಳವಳ್ಳಿ | ಮಳವಳ್ಳಿ ಬಸ್ ನಿಲ್ದಾಣ(ಮಂಡ್ಯ ಕಡೆಯಿಂದ ಒಳಗೆ ಪ್ರವೇಶಿಸುವ ಪ್ರವೇಶ ದ್ವಾರದ ಕಡೆಯಲ್ಲಿ ಎಡ ಭಾಗದ ಕಾಂಪೌಂಡ್ ಪಕ್ಕದಲ್ಲಿ) | 1 | 20'*8' | 160 | 160 | - | 7002 | |
| ಒಟ್ಟು | | | 5 | | | 960 | - | 38840 | |

ನಾಗಮಂಗಲ ಬಸ್ ನಿಲ್ದಾಣದ ಹೊರ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್-04

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ(ಜಿಎಸ್‌ಟಿ ಸೇರಿ) |
|---|---|---|---|---|---|---|---|---|---|
| ಅ.ಹೋರ್ಡಿಂಗ್ಸ್ | ನಾಗಮಂಗಲ | ನಾಗಮಂಗಲ ಬಸ್ ನಿಲ್ದಾಣ( ಮೈಸೂರು ಕಡೆಯಿಂದ ಒಳ ಪ್ರವೇಶಿಸುವ ಎಡ ಭಾಗದ ಕಾಂಪೌಂಡ್ ಪಕ್ಕದಲ್ಲಿ ಶೌಚಾಯಲಯದ ಬಲ ಭಾಗದ ಹತ್ತಿರ -2, ಶೌಚಾಯಲಯದ ಎಡ ಭಾಗದ ಖಾಲಿ ಸ್ಥಳದಲ್ಲಿ-2, ಬೆಳ್ಳೂರು ಕಡೆಹೊರ ಹೋಗುವ ಎಡ ಬಾಗದ ಘಟಕದ ಕಾಂಪೌಂಡ್ ಗೋಡೆ ಪಕ್ಕದಲ್ಲಿ-4) | 8 | 20'*10' | 200 | 1600 | - | 63706 | 369 |
| ಅ.ಹೋರ್ಡಿಂಗ್ಸ್ | ನಾಗಮಂಗಲ | ನಾಗಮಂಗಲ ಘಟಕ(ಘಟಕದ ಕಟ್ಟಡದ ಪೂರ್ವ ಭಾಗದ ಕಾಂಪೌಂಡ್ ಪಕ್ಕದಲ್ಲಿ ಮೈಸೂರು-ಬೆಳ್ಳೂರು ರಸ್ತೆ ಕಡೆ-3) | 3 | 20'*10' | 200 | 600 | - | 23890 | |
| ಒಟ್ಟು | | | 11 | | | 2200 | 29198 | 87596 | |

ಕೆ.ಆರ್.ಪೇಟೆ ಬಸ್ ನಿಲ್ದಾಣದ ಹೊರ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್-05

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ(ಜಿಎಸ್ ಟಿ ಸೇರಿ) |
|---|---|---|---|---|---|---|---|---|---|
| ಅ.ಹೋರ್ಡಿಂಗ್ಸ್ | ಕೆ.ಆರ್.ಪೇಟೆ | ಕೆ.ಆರ್.ಪೇಟೆ ಘಟಕ(ಘಟಕದ ಕಟ್ಟಡದ ಪೂರ್ವ ದಿಕ್ಕಿನ ಕಾಂಪೌಂಡ್ ಪಕ್ಕದಲ್ಲಿ ಚನ್ನರಾಯಪಟ್ಟಣ-ಮೈಸೂರು ಹೆದ್ದಾರಿಗೆ ಕಡೆ-2) | 2 | 20'*10' | 200 | 400 | - | 15926 | 400 |
| ಅ.ಹೋರ್ಡಿಂಗ್ಸ್ | ಕೆ.ಆರ್.ಪೇಟೆ | ಕೆ.ಆರ್.ಪೇಟೆ ಬಸ್ ನಿಲ್ದಾಣ (ಮೈಸೂರು ಕಡೆಯಿಂದ ಬರುವ ವಾಹಗಳ ಒಳ ಪ್ರವೇಶದ ಎಡಭಾಗದಲ್ಲಿ-1 ಶೌಚಾಲಯದ ಪಕ್ಕ-1, ಶೌಚಾಲಯದ ಪಕ್ಕದ ಖಾಲಿ ಸ್ಥಳದಲ್ಲಿ-4, ನಾಗಮಂಗಲ ಕಡೆ ಹೊರ ಹೋಗುವ ಕಡೆ ಎಡ ಭಾಗದ ಕಾಂಪೌಂಡ್ ಪಕ್ಕದಲ್ಲಿ-3 | 9 | 20'*10' | 200 | 1800 | - | 71669 | |
| ಒಟ್ಟು | | | 11 | | | 2200 | - | 87595 | |

ಪಾಂಡವಪುರ ಬಸ್ ನಿಲ್ದಾಣದ ಹೊರ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್-06

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ(ಜಿಎಸ್ ಟಿ ಸೇರಿ) |
|---|---|---|---|---|---|---|---|---|---|
| ಅ.ಹೋರ್ಡಿಂಗ್ಸ್ | ಪಾಂಡವಪುರ | ಪಾಂಡವಪುರ ಬಸ್ ನಿಲ್ದಾಣ-ಮೈಸೂರು ಕಡೆಯಿಂದ ವಾಹನಗಳು ಒಳಗೆ ಪ್ರವೇಶಿಸುವ ಎಡ ಭಾಗದಲ್ಲಿ-1, ಮೈಸೂರು ಕಡೆಯಿಂದ ಬರುವ ವಾಹನಗಳ ನಿಲುಗಡೆಯ ಎಡಭಾಗದ ಕಾಂಪೌಂಡ್ ಪಕ್ಕದಲ್ಲಿ-5, | 7 | 20'*10' | 200 | 1400 | - | 55742 | 369 |

| | | | | | | | | | |
|---|---|---|---|---|---|---|---|---|---|
| | | ವಾಹನಗಳು ನಾಗಮಂಗಲ ಕಡೆ ತಿರುಗುವ ಎಡ ಭಾಗದ ಕಾಂಪೌಂಡ್ ಪಕ್ಕದಲ್ಲಿ-1) | | | | | | | |
| ಆ.ಆರ್ಚ್ | ಪಾಂಡವಪುರ | ಪಾಂಡವಪುರ ಬಸ್ ನಿಲ್ದಾಣ ವಾಹನಗಳು ಒಳ ಹೋಗುವ ಪ್ರವೇಶ ದ್ವಾರ | 1 | V:2*2 1/2'*15 =75 H:1*72* 4=288 | 363 | 638 | - | 38034 | |
| | | ಪಾಂಡವಪುರ ಬಸ್ ನಿಲ್ದಾಣ ವಾಹನಗಳು ಹೊರ ಹೋಗುವ ಪ್ರವೇಶ ದ್ವಾರ | 1 | V:2*2 1/2'*15' =75 H:1*50* 4'=200 | 275 | | | | |
| ಒಟ್ಟು | | | 9 | | | 2038 | - | 93776 | |

ಹಲಗೂರು ಬಸ್ ನಿಲ್ದಾಣದ ಹೊರ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್-07

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ(ಜಿಎಸ್ ಟಿ ಸೇರಿ) |
|---|---|---|---|---|---|---|---|---|---|
| ಅ.ಹೋರ್ಡಿಂಗ್ಸ್ | ಮಳವಳ್ಳಿ | ಹಲಗೂರು ಬಸ್ ನಿಲ್ದಾಣ ಬಸ್ ನಿಲ್ದಾಣ ಪಶ್ಚಿಮದ ಕಡೆ ಕಾಂಪೌಂಡ್ ಪಕ್ಕದಲ್ಲಿ-4, ಉತ್ತರಕ್ಕೆ-2, ಪೂರ್ವಕ್ಕೆ-2 | 8 | 20'*10' | 200 | 1600 | - | 32026 | 244 |
| ಆ.ಯೂನಿಪೋಲ್ಸ್ | ಮಳವಳ್ಳಿ | ಹಲಗೂರು ಬಸ್‌ನಿಲ್ದಾಣ( ವಾಹನಗಳು ಬಸ್ ನಿಲ್ದಾಣದ ಒಳಗೆ ಪ್ರವೇಶಿಸುವ ದ್ವಾರದಿಂದ ಒಳಗಿನ ಮಧ್ಯ ಭಾಗದಲ್ಲಿ) | 1 | 20'*8' | 160 | 160 | - | 7006 | |
| ಒಟ್ಟು | | | 9 | | | 1760 | - | 39032 | |

ಬೆಳಕವಾಡಿ ಬಸ್ ನಿಲ್ದಾಣದ ಹೊರ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್-08

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ(ಜಿಎಸ್ ಟಿ ಸೇರಿ) |
|---|---|---|---|---|---|---|---|---|---|
| ಅ.ಹೋರ್ಡಿಂಗ್ಸ್ | ಮಳವಳ್ಳಿ | ಬೆಳಕವಾಡಿ ಬಸ್ ನಿಲ್ದಾಣ(ಮಳವಳ್ಳಿ ಕಡೆಯಿಂದ ವಾಹನಗಳು ಒಳ ಬರುವ ಎಡಭಾಗದಲ್ಲಿ-1, ಬಲಭಾಗದಲ್ಲಿ-1 | 2 | 20'*10' | 200 | 400 | - | 8006 | 118 |

ಬನ್ನೂರು ಬಸ್ ನಿಲ್ದಾಣದ ಹೊರ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್–09

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ(ಜಿಎಸ್ ಟಿ ಸೇರಿ) |
|---|---|---|---|---|---|---|---|---|---|
| ಅ.ಹೋರ್ಡಿಂಗ್ಸ್ | ಮಳವಳ್ಳಿ | ಬನ್ನೂರು ಬಸ್ ನಿಲ್ದಾಣ(ಮೈಸೂರು ಕಡೆ ಹೊರ ಹೋಗುವ ಬಲ ಭಾಗದ ಕಾಂಪೌಂಡ್ ಪಕ್ಕದಲ್ಲಿ ಅಂದರೆ ಬಸ್ ನಿಲ್ದಾಣದ ಕಟ್ಟಡದ ಪಶ್ಚಿಮಕ್ಕೆ–4) | 4 | 20’*10’ | 200 | 800 | - | 16013 | 118 |

ಆದಿಚುಂಚನಗಿರಿ ಬಸ್ ನಿಲ್ದಾಣದ ಹೊರ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್–10

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ(ಜಿಎಸ್ ಟಿ ಸೇರಿ) |
|---|---|---|---|---|---|---|---|---|---|
| ಅ.ಹೋರ್ಡಿಂಗ್ಸ್ | ನಾಗಮಂಗಲ | ಆದಿಚುಂಚನಗಿರಿ ಬಸ್ ನಿಲ್ದಾಣ(ನಾಗಮಂಗಲ ಕಡೆಯಿಂದ ಒಳ ಬರುವ ಎಡ ಭಾಗದ ಕಾಂಪೌಂಡ್ ಪಕ್ಕದಲ್ಲಿ–2, ಬಸ್ ನಿಲ್ದಾಣದ ಕಟ್ಟಡದ ಪಶ್ಚಿಮದ ಕಾಂಪೌಂಡ್ ಪಕ್ಕದಲ್ಲಿ–3,ತುರುವೇಕೆರೆ ಕಡೆ ವಾಹನಗಳು ಹೊರ ಹೋಗುವ ಎಡ ಭಾಗದ ಕಾಂಪೌಂಡ್ ಪಕ್ಕದಲ್ಲಿ–2 | 7 | 20’*10’ | 200 | 1400 | - | 28022 | 118 |

ಕಿಕ್ಕೇರಿ ಬಸ್ ನಿಲ್ದಾಣದ ಹೊರ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್–11

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ(ಜಿಎಸ್ ಟಿ ಸೇರಿ) |
|---|---|---|---|---|---|---|---|---|---|
| ಅ.ಹೋರ್ಡಿಂಗ್ಸ್ | ಕೆ.ಆರ್.ಪೇಟೆ | ಕಿಕ್ಕೇರಿ ಬಸ್ ನಿಲ್ದಾಣ (ಚನ್ನರಾಯ ಪಟ್ಟಣ ಕಡೆಯಿಂದ ವಾಹನ ಒಳ | 8 | 20’*10’ | 200 | 1600 | - | 32026 | 126 |

| | | | | | | | | | |
|---|---|---|---|---|---|---|---|---|---|
| | | ಬರುವ ಎಡ ಭಾಗದ ಕಾಂಪೌಂಡ್ ಪಕ್ಕದಲ್ಲಿ-2, ಎಡ ಬಾಗದ ಮೂಲೆಯಲ್ಲಿ-1 ಚನ್ನರಾಯಪಟ್ಟಣ ಕಡೆಯಿಂದ ಬರುವ ವಾಹನಗಳಿಂದ ಪ್ರಯಾಣಿಕರು ಇಳಿಯುವ ಸ್ಥಳದ ಎಡಭಾಗ-3, ಮೈಸೂರು ಕಡೆ ಹೊರ ಹೋಗುವ ಎಡ ಭಾಗದ ಕಾಂಪೌಂಡ್ ಪಕ್ಕ-2) | | | | | | | |

ಶ್ರೀರಂಗಪಟ್ಟಣ ಬಸ್ ನಿಲ್ದಾಣದ ಹೊರ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್-12

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ(ಜಿಎಸ್ ಟಿ ಸೇರಿ) |
|---|---|---|---|---|---|---|---|---|---|
| ಅ.ಹೋರ್ಡಿಂಗ್ಸ್ | ಪಾಂಡವಪುರ | ಶ್ರೀರಂಗಪಟ್ಟಣ ಬಸ್ ನಿಲ್ದಾಣ (ಮೈಸೂರು ಕಡೆಯಿಂದ ವಾಹನ ಒಳ ಪ್ರವೇಶಿಸುವ ಎಡ ಭಾಗದ ಕಾಂಪೌಂಡ್ ಪಕ್ಕದಲ್ಲಿ-02 & ಕೆ.ಆರ್.ಪೇಟೆ-ಹಾಸನ ಪ್ಲಾಟ್ ಪಾರಂ ಶೆಲ್ಟರ್ ಹಿಂಭಾಗದಲ್ಲಿ-02 & ಬೆಂಗಳೂರು ಕಡೆ ವಾಹನ ಹೊರ ಹೋಗುವ ಎಡಭಾಗದ ಕಾಂಪೌಂಡ್ ಪಕ್ಕದಲ್ಲಿ-01) | 5 | 20’*10’ | 200 | 1000 | - | 39816 | 412 |
| ಆ.ಆರ್ಚ್ | ಪಾಂಡವಪುರ | ಶ್ರೀರಂಗಪಟ್ಟಣ ಬಸ್ ನಿಲ್ದಾಣ ವಾಹನಗಳು ಒಳ ಹೋಗುವ ಪ್ರವೇಶ ದ್ವಾರ | 1 | V:2*3'*15' =90 H:1*50'*5'=250 | 340 | 710 | - | 64807 | |
| | | ಶ್ರೀರಂಗಪಟ್ಟಣ ಬಸ್ ನಿಲ್ದಾಣ ವಾಹನಗಳು ಹೊರ ಹೋಗುವ ಪ್ರವೇಶ ದ್ವಾರ | 1 | V:2*3'*15' =90 H:1*56'*5'=280 | 370 | | | | |
| ಒಟ್ಟು | | | 7 | | | 1710 | - | 104623 | |

ಮೇಲುಕೋಟೆ ಬಸ್ ನಿಲ್ದಾಣದ ಹೊರ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್-13

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ(ಜಿಎಸ್ ಟಿ ಸೇರಿ) |
|---|---|---|---|---|---|---|---|---|---|
| ಅ.ಹೋರ್ಡಿಂಗ್ಸ್ | ಪಾಂಡವಪುರ | ಮೇಲುಕೋಟೆ ಬಸ್ ನಿಲ್ದಾಣ(ವಾಹನಗಳು ಒಳ ಹೋಗುವ ಅಂದರೆ ದೇವಸ್ಥಾನದ ಕಡೆಯಿಂದ ಒಳ ಬರುವ ದ್ವಾರದ ಎಡ ಬಾಗದಲ್ಲಿ – 4, ಬಸ್ ನಿಲ್ದಾಣದ ಪಶ್ಚಿಮದ ಕಾಂಪೌಂಡ್ ಪಕ್ಕದಲ್ಲಿ-3 ಮಂಡ್ಯ ಕಡೆ ಹೋಗುವ ಸ್ಥಳದ ಎಡ ಭಾಗದ ಕಾಂಪೌಂಡ್ ಕಡೆ-3) | 10 | 20'*10' | 200 | 2000 | - | 40032 | 157 |

ಚಿನಕುರಳಿ ಬಸ್ ನಿಲ್ದಾಣದ ಹೊರ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್-14

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ(ಜಿಎಸ್ ಟಿ ಸೇರಿ) |
|---|---|---|---|---|---|---|---|---|---|
| ಅ.ಹೋರ್ಡಿಂಗ್ಸ್ | ಪಾಂಡವಪುರ | ಚಿನಕುರಳಿ ಬಸ್ ನಿಲ್ದಾಣ(ಮೈಸೂರು ಕಡೆಯಿಂದ ಒಳ ಪ್ರವೇಶಿಸುವ ಎಡ ಭಾಗದ ಕಾಂಪೌಂಡ್ ಗೋಡೆ ಪಕ್ಕದಲ್ಲಿ ಶೌಚಾಲದ ಹತ್ತಿರ-1, ಮೈಸೂರು ಕಡೆಯಿಂದ ಬರುವ ಪ್ರಯಾಣಿಕರು ಇಳಿಯುವ ಸ್ಥಳದ ಎಡಕಡೆ ಕಾಂಪೌಂಡ್ ಗೋಡೆ ಪಕ್ಕ-3) | 4 | 20'*10' | 200 | 800 | - | 16013 | 118 |

ಕೊಪ್ಪ ಬಸ್ ನಿಲ್ದಾಣದ ಹೊರ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್ –15

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ(ಜಿಎಸ್ ಟಿ ಸೇರಿ) |
|---|---|---|---|---|---|---|---|---|---|
| ಅ.ಹೋರ್ಡಿಂಗ್ಸ್ | ಮದ್ದೂರು | ಕೊಪ್ಪ ಬಸ್ ನಿಲ್ದಾಣ(ಕೊಪ್ಪ ಬಸ್ ನಿಲ್ದಾಣದ ಕಟ್ಟಡದ ಉತ್ತರಕ್ಕೆ ಕಾಂಪೌಂಡ್ ಪಕ್ಕದಲ್ಲಿ ಅಂದರೆ ಕೌಡ್ಲೆ ಕಡೆ ವಾಹನಗಳು ಹೊರ ಹೋಗುವ ಬಲ ಭಾಗಕ್ಕೆ–3, ಕಟ್ಟಡದ ಪಶ್ಚಿಮಕ್ಕೆ–1, ಶೌಚಾಲಯ ಹಿಂಭಾಗ ಕಾಂಪೌಂಡ ಪಕ್ಕದಲ್ಲಿ | 5 | 20’*10’ | 200 | 1000 | - | 20016 | 118 |

ಮಂಡ್ಯ ಬಸ್ ನಿಲ್ದಾಣದ ಒಳ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್–16

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀಣರ್ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ(ಜಿಎಸ್‌ಟಿ ಸೇರಿ) |
|---|---|---|---|---|---|---|---|---|---|
| ಅ)ಗ್ಲೋಸೈನ್ ಬೋರ್ಡ್‌ಗಳ ವಿವರ | ಮಂಡ್ಯ | ಮಂಡ್ಯ ಬಸ್ ನಿಲ್ದಾಣ | 6 | 5’*2.5’ | 12.5 | 75 | - | 4964 | 118 |
| ಆ) ಪ್ಲಾಟ್ ಪಾಮ್ ಬೋಡ್ಸ್ | ಮಂಡ್ಯ | ಮಂಡ್ಯ ಬಸ್ ನಿಲ್ದಾಣ | 6 | 5’*2.5’ | 12.5 | 75 | - | 6944 | |
| ಇ) ಪಿಲ್ಲರ್ ಬೋರ್ಡ್ಸ್ | ಮಂಡ್ಯ | ಮಂಡ್ಯ ಬಸ್ ನಿಲ್ದಾಣ | 8 | 6’*3’ | 18 | 144 | - | 3828 | |
| ಒಟ್ಟು | | | 20 | 0 | | 294 | - | 15735 | |

ಮದ್ದೂರು ಬಸ್ ನಿಲ್ದಾಣದ ಒಳ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್–17

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ(ಜಿಎಸ್‌ಟಿ ಸೇರಿ) |
|---|---|---|---|---|---|---|---|---|---|
| ಅ)ಗ್ಲೋಸೈನ್ ಬೋರ್ಡ್‌ಗಳ ವಿವರ | ಮದ್ದೂರು | ಮದ್ದೂರು ಬಸ್ ನಿಲ್ದಾಣ | 5 | 5’*2.5’ | 12.5 | 62.5 | - | 3105 | 118 |
| ಆ) ಪ್ಲಾಟ್ ಪಾಮ್ ಬೋಡ್ಸ್ | ಮದ್ದೂರು | ಮದ್ದೂರು ಬಸ್ ನಿಲ್ದಾಣ | 6 | 5’*2.5’ | 12.5 | 75 | - | 5211 | |
| ಇ) ಪಿಲ್ಲರ್ ಬೋರ್ಡ್ಸ್ | ಮದ್ದೂರು | ಮದ್ದೂರು ಬಸ್ ನಿಲ್ದಾಣ | 8 | 6’*3’ | 18 | 144 | - | 2877 | |
| ಒಟ್ಟು | | | 19 | 0 | | 281.5 | - | 11193 | |

ಮಳವಳ್ಳಿ ಬಸ್ ನಿಲ್ದಾಣದ ಒಳ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್–18

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ(ಜಿಎಸ್‌ಟಿ ಸೇರಿ) |
|---|---|---|---|---|---|---|---|---|---|
| ಅ)ಗ್ಲೋಸೈನ್ ಬೋರ್ಡ್‌ಗಳ ವಿವರ | ಮಳವಳ್ಳಿ | ಮಳವಳ್ಳಿ ಬಸ್ ನಿಲ್ದಾಣ | 4 | 5’*2.5’ | 12.5 | 50 | - | 2484 | 118 |
| ಆ) ಪ್ಲಾಟ್ ಪಾಮ್ ಬೋಡ್ಸ್ | ಮಳವಳ್ಳಿ | ಮಳವಳ್ಳಿ ಬಸ್ ನಿಲ್ದಾಣ | 5 | 5’*2.5’ | 12.5 | 62.5 | - | 2898 | |
| ಇ) ಪಿಲ್ಲರ್ ಬೋರ್ಡ್ಸ್ | ಮಳವಳ್ಳಿ | ಮಳವಳ್ಳಿ ಬಸ್ ನಿಲ್ದಾಣ | 8 | 6’*3’ | 18 | 144 | - | 1926 | |
| ಒಟ್ಟು | | | 17 | 0 | | 256.5 | - | 7308 | |

ನಾಗಮಂಗಲ ಬಸ್ ನಿಲ್ದಾಣದ ಒಳ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್–19

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ(ಜಿಎಸ್‌ಟಿ ಸೇರಿ) |
|---|---|---|---|---|---|---|---|---|---|
| ಅ)ಗ್ಲೋಸೈನ್ ಬೋರ್ಡ್‌ಗಳ ವಿವರ | ನಾಗಮಂಗಲ | ನಾಗಮಂಗಲ ಬಸ್ ನಿಲ್ದಾಣ | 6 | 5’*2.5’ | 12.5 | 75 | - | 3726 | 118 |
| ಆ) ಪ್ಲಾಟ್ ಪಾಮ್ ಬೋಡ್ಸ್ | ನಾಗಮಂಗಲ | ನಾಗಮಂಗಲ ಬಸ್ ನಿಲ್ದಾಣ | 5 | 5’*2.5’ | 12.5 | 62.5 | - | 2898 | |
| ಇ) ಪಿಲ್ಲರ್ ಬೋರ್ಡ್ಸ್ | ನಾಗಮಂಗಲ | ನಾಗಮಂಗಲ ಬಸ್ ನಿಲ್ದಾಣ | 10 | 6’*3’ | 18 | 180 | - | 2406 | |
| ಒಟ್ಟು | | | 21 | 0 | | 317.5 | - | 9030 | |

ಕೆ.ಆರ್.ಪೇಟೆ ಬಸ್ ನಿಲ್ದಾಣದ ಒಳ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್–20

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ(ಜಿಎಸ್‌ಟಿ ಸೇರಿ) |
|---|---|---|---|---|---|---|---|---|---|
| ಅ)ಗ್ಲೋಸೈನ್ ಬೋರ್ಡ್‌ಗಳ ವಿವರ | ಕೆ.ಆರ್.ಪೇಟೆ | ಕೆ.ಆರ್.ಪೇಟೆ ಬಸ್ ನಿಲ್ದಾಣ | 5 | 5’*2.5’ | 12.5 | 62.5 | - | 3105 | 118 |
| ಆ) ಪ್ಲಾಟ್ ಪಾಮ್ ಬೋಡ್ಸ್ | ಕೆ.ಆರ್.ಪೇಟೆ | ಕೆ.ಆರ್.ಪೇಟೆ ಬಸ್ ನಿಲ್ದಾಣ | 5 | 5’*2.5’ | 12.5 | 62.5 | - | 2898 | |
| ಇ) ಪಿಲ್ಲರ್ ಬೋರ್ಡ್ಸ್ | ಕೆ.ಆರ್.ಪೇಟೆ | ಕೆ.ಆರ್.ಪೇಟೆ ಬಸ್ ನಿಲ್ದಾಣ | 8 | 6’*3’ | 18 | 144 | - | 1926 | |
| ಒಟ್ಟು | | | 18 | 0 | | 269 | - | 7929 | |

ಪಾಂಡವಪುರ ಬಸ್ ನಿಲ್ದಾಣದ ಒಳ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್–21

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ(ಜಿಎಸ್‌ಟಿ ಸೇರಿ) |
|---|---|---|---|---|---|---|---|---|---|
| ಅ)ಗ್ಲೋಸೈನ್ ಬೋರ್ಡ್‌ಗಳ ವಿವರ | ಪಾಂಡವಪುರ | ಪಾಂಡವಪುರ ಬಸ್ ನಿಲ್ದಾಣ | 6 | 5’*2.5’ | 12.5 | 75 | - | 3726 | 118 |
| ಆ) ಪ್ಲಾಟ್ ಪಾಮ್ ಬೋಡ್ಸ್ | ಪಾಂಡವಪುರ | ಪಾಂಡವಪುರ ಬಸ್ ನಿಲ್ದಾಣ | 7 | 5’*2.5’ | 12.5 | 87.5 | - | 4059 | |
| ಇ) ಪಿಲ್ಲರ್ ಬೋರ್ಡ್ಸ್ | ಪಾಂಡವಪುರ | ಪಾಂಡವಪುರ ಬಸ್ ನಿಲ್ದಾಣ | 12 | 6’*3’ | 18 | 216 | - | 2889 | |
| ಒಟ್ಟು | | | 25 | 0 | | 378.5 | - | 10674 | |

ಹಲಗೂರು ಬಸ್ ನಿಲ್ದಾಣದ ಒಳ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್–22

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ(ಜಿಎಸ್ಟಿ ಸೇರಿ) |
|---|---|---|---|---|---|---|---|---|---|
| ಅ)ಗ್ಲೋಸೈನ್ ಬೋರ್ಡ್‌ಗಳ ವಿವರ | ಮಳವಳ್ಳಿ | ಹಲಗೂರು ಬಸ್ ನಿಲ್ದಾಣ | 4 | 5'*2.5' | 12.5 | 50 | - | 1659 | 118 |
| ಆ) ಪ್ಲಾಟ್ ಪಾಮ್ ಬೋರ್ಡ್ಸ್ | ಮಳವಳ್ಳಿ | ಹಲಗೂರು ಬಸ್ ನಿಲ್ದಾಣ | 4 | 5'*2.5' | 12.5 | 50 | - | 2319 | |
| ಇ) ಪಿಲ್ಲರ್ ಬೋರ್ಡ್ಸ್ | ಮಳವಳ್ಳಿ | ಹಲಗೂರು ಬಸ್ ನಿಲ್ದಾಣ | 8 | 6'*3' | 18 | 144 | - | 1926 | |
| ಒಟ್ಟು | | | 16 | 0 | | 244 | - | 5904 | |

ಬೆಳಕವಾಡಿ ಬಸ್ ನಿಲ್ದಾಣದ ಒಳ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್–23

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ(ಜಿಎಸ್ಟಿ ಸೇರಿ) |
|---|---|---|---|---|---|---|---|---|---|
| ಅ)ಗ್ಲೋಸೈನ್ ಬೋರ್ಡ್‌ಗಳ ವಿವರ | ಮಳವಳ್ಳಿ | ಬೆಳಕವಾಡಿ ಬಸ್ ನಿಲ್ದಾಣ | 2 | 5'*2.5' | 12.5 | 25 | - | 831 | 118 |
| ಆ) ಪ್ಲಾಟ್ ಪಾಮ್ ಬೋರ್ಡ್ಸ್ | ಮಳವಳ್ಳಿ | ಬೆಳಕವಾಡಿ ಬಸ್ ನಿಲ್ದಾಣ | 3 | 5'*2.5' | 12.5 | 37.5 | - | 873 | |
| ಇ) ಪಿಲ್ಲರ್ ಬೋರ್ಡ್ಸ್ | ಮಳವಳ್ಳಿ | ಬೆಳಕವಾಡಿ ಬಸ್ ನಿಲ್ದಾಣ | 4 | 6'*3' | 18 | 72 | - | 489 | |
| ಒಟ್ಟು | | | 9 | 0 | | 134.5 | - | 2193 | |

ಬನ್ನೂರು ಬಸ್ ನಿಲ್ದಾಣದ ಒಳ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್–24

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ(ಜಿಎಸ್ಟಿ ಸೇರಿ) |
|---|---|---|---|---|---|---|---|---|---|
| ಅ)ಗ್ಲೋಸೈನ್ ಬೋರ್ಡ್‌ಗಳ ವಿವರ | ಮಳವಳ್ಳಿ | ಬನ್ನೂರು ಬಸ್ ನಿಲ್ದಾಣ | 4 | 5'*2.5' | 12.5 | 50 | - | 1659 | 118 |
| ಆ) ಪ್ಲಾಟ್ ಪಾಮ್ ಬೋರ್ಡ್ಸ್ | ಮಳವಳ್ಳಿ | ಬನ್ನೂರು ಬಸ್ ನಿಲ್ದಾಣ | 4 | 5'*2.5' | 12.5 | 50 | - | 2319 | |
| ಇ) ಪಿಲ್ಲರ್ ಬೋರ್ಡ್ಸ್ | ಮಳವಳ್ಳಿ | ಬನ್ನೂರು ಬಸ್ ನಿಲ್ದಾಣ | 8 | 6'*3' | 18 | 144 | - | 1926 | |
| ಒಟ್ಟು | | | 16 | 0 | | 244 | - | 5904 | |

ಆದಿಚುಂಚನಗಿರಿ ಬಸ್ ನಿಲ್ದಾಣದ ಒಳ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್–25

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ(ಜಿಎಸ್ಟಿ ಸೇರಿ) |
|---|---|---|---|---|---|---|---|---|---|
| ಅ)ಗ್ಲೋಸೈನ್ ಬೋರ್ಡ್‌ಗಳ ವಿವರ | ನಾಗಮಂಗಲ | ಆದಿಚುಂಚನಗಿರಿ ಬಸ್ ನಿಲ್ದಾಣ | 6 | 5'*2.5' | 12.5 | 75 | - | 1995 | 118 |
| ಆ) ಪ್ಲಾಟ್ ಪಾಮ್ ಬೋರ್ಡ್ಸ್ | ನಾಗಮಂಗಲ | ಆದಿಚುಂಚನಗಿರಿ ಬಸ್ ನಿಲ್ದಾಣ | 8 | 5'*2.5' | 12.5 | 100 | - | 2328 | |

| | | | | | | | | | |
|---|---|---|---|---|---|---|---|---|---|
| ಇ) ಪಿಲ್ಲರ್ ಬೋರ್ಡ್ಸ್ | ನಾಗಮಂಗಲ | ಆದಿಚುಂಚನಗಿರಿ ಬಸ್ ನಿಲ್ದಾಣ | 14 | 6’*3’ | 18 | 252 | - | 1710 | |
| ಒಟ್ಟು | | | 28 | 0 | | 427 | - | 6033 | |

ಕಿಕ್ಕೇರಿ ಬಸ್ ನಿಲ್ದಾಣದ ಒಳ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್-26

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ( ಜಿಎಸ್ಟಿ ಸೇರಿ) |
|---|---|---|---|---|---|---|---|---|---|
| ಅ)ಗ್ಲೋಸೈನ್ ಬೋರ್ಡ್‌ಗಳ ವಿವರ | ಕೆ.ಆರ್.ಪೇಟೆ | ಕಿಕ್ಕೇರಿ ಬಸ್ ನಿಲ್ದಾಣ | 4 | 5’*2.5’ | 12.5 | 50 | - | 1659 | |
| ಆ) ಪ್ಲಾಟ್ ಪಾಮ್ ಬೋಡ್ಸ್ | ಕೆ.ಆರ್.ಪೇಟೆ | ಕಿಕ್ಕೇರಿ ಬಸ್ ನಿಲ್ದಾಣ | 4 | 5’*2.5’ | 12.5 | 50 | - | 2319 | 118 |
| ಇ) ಪಿಲ್ಲರ್ ಬೋರ್ಡ್ಸ್ | ಕೆ.ಆರ್.ಪೇಟೆ | ಕಿಕ್ಕೇರಿ ಬಸ್ ನಿಲ್ದಾಣ | 6 | 6’*3’ | 18 | 108 | - | 1446 | |
| ಒಟ್ಟು | | | 14 | 0 | | 208 | - | 5424 | |

ಶ್ರೀರಂಗಪಟ್ಟಣ ಬಸ್ ನಿಲ್ದಾಣದ ಒಳ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್-27

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ( ಜಿಎಸ್ಟಿ ಸೇರಿ) |
|---|---|---|---|---|---|---|---|---|---|
| ಅ)ಗ್ಲೋಸೈನ್ ಬೋರ್ಡ್‌ಗಳ ವಿವರ | ಪಾಂಡವಪುರ | ಶ್ರೀರಂಗಪಟ್ಟಣ ಬಸ್ ನಿಲ್ದಾಣ | 5 | 5’*2.5’ | 12.5 | 62.5 | - | 3105 | |
| ಆ) ಪ್ಲಾಟ್ ಪಾಮ್ ಬೋಡ್ಸ್ | ಪಾಂಡವಪುರ | ಶ್ರೀರಂಗಪಟ್ಟಣ ಬಸ್ ನಿಲ್ದಾಣ | 5 | 5’*2.5’ | 12.5 | 62.5 | - | 4344 | 118 |
| ಇ) ಪಿಲ್ಲರ್ ಬೋರ್ಡ್ಸ್ | ಪಾಂಡವಪುರ | ಶ್ರೀರಂಗಪಟ್ಟಣ ಬಸ್ ನಿಲ್ದಾಣ | 12 | 6’*3’ | 18 | 216 | - | 4317 | |
| ಒಟ್ಟು | | | 22 | 0 | | 341 | - | 11766 | |

ಮೇಲುಕೋಟೆ ಬಸ್ ನಿಲ್ದಾಣದ ಒಳ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್-28

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ( ಜಿಎಸ್ಟಿ ಸೇರಿ) |
|---|---|---|---|---|---|---|---|---|---|
| ಅ)ಗ್ಲೋಸೈನ್ ಬೋರ್ಡ್‌ಗಳ ವಿವರ | ಪಾಂಡವಪುರ | ಮೇಲುಕೋಟೆ ಬಸ್ ನಿಲ್ದಾಣ | 6 | 5’*2.5’ | 12.5 | 75 | - | 2490 | |
| ಆ) ಪ್ಲಾಟ್ ಪಾಮ್ ಬೋಡ್ಸ್ | ಪಾಂಡವಪುರ | ಮೇಲುಕೋಟೆ ಬಸ್ ನಿಲ್ದಾಣ | 8 | 5’*2.5’ | 12.5 | 100 | - | 4638 | 118 |
| ಇ) ಪಿಲ್ಲರ್ ಬೋರ್ಡ್ಸ್ | ಪಾಂಡವಪುರ | ಮೇಲುಕೋಟೆ ಬಸ್ ನಿಲ್ದಾಣ | 14 | 6’*3’ | 18 | 252 | - | 3372 | |
| ಒಟ್ಟು | | | 28 | 0 | | 427 | - | 10500 | |

ಚಿನಕುರಳಿ ಬಸ್ ನಿಲ್ದಾಣದ ಒಳ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್-29

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ( ಜಿಎಸ್ಟಿ ಸೇರಿ) |
|---|---|---|---|---|---|---|---|---|---|
| ಅ)ಗ್ಲೋಸೈನ್ | ಪಾಂಡವಪುರ | ಚಿನಕುರಳಿ ಬಸ್ | 4 | 5’*2.5’ | 12.5 | 50 | - | 1659 | 118 |

| | | | | | | | | | |
|---|---|---|---|---|---|---|---|---|---|
| ಬೋರ್ಡ್‌ಗಳ ವಿವರ | | ನಿಲ್ದಾಣ | | | | | | | |
| ಆ) ಪ್ಲಾಟ್ ಪಾಮ್ ಬೋರ್ಡ್ಸ್ | ಪಾಂಡವಪುರ | ಚಿನಕುರಳಿ ಬಸ್ ನಿಲ್ದಾಣ | 3 | 5'*2.5' | 12.5 | 37.5 | - | 1740 | |
| ಇ) ಪಿಲ್ಲರ್ ಬೋರ್ಡ್ಸ್ | ಪಾಂಡವಪುರ | ಚಿನಕುರಳಿ ಬಸ್ ನಿಲ್ದಾಣ | 4 | 6'*3' | 18 | 72 | - | 963 | |
| ಒಟ್ಟು | | | 11 | 0 | | 159.5 | - | 4362 | |

ಕೊಪ್ಪ ಬಸ್ ನಿಲ್ದಾಣದ ಒಳ ಆವರಣದಲ್ಲಿರುವ ಜಾಹಿರಾತುಗಳ ವಿವರ ಪ್ಯಾಕೇಜ್–30

| ಜಾಹಿರಾತಿನ ವಿಧ | ಘಟಕದ ಹೆಸರು | ಜಾಹಿರಾತು ಸ್ಥಳದ ವಿವರ | ಸಂಖ್ಯೆ | ವಿಸ್ತೀರ್ಣ | ಪ್ರತಿ ಫಲಕದ ಒಟ್ಟು ವಿಸ್ತೀರ್ಣ | ಒಟ್ಟು ವಿಸ್ತೀರ್ಣ | ನಿಗಧಿತ ಒಟ್ಟು ಮಾಸಿಕ ಮಿತ ವ್ಯಯ ಶುಲ್ಕ ರೂ. | ಇಎಂಡಿ | ಅರ್ಜಿ ಶುಲ್ಕ( ಜಿಎಸ್ ಟಿ ಸೇರಿ) |
|---|---|---|---|---|---|---|---|---|---|
| ಅ.ಗ್ಲೋಸೈನ್ ಬೋರ್ಡ್ | ಮದ್ದೂರು | ಕೊಪ್ಪ ಬಸ್ ನಿಲ್ದಾಣ | 2 | 5'*2.5' | 12.5 | 25 | - | 831 | 118 |

| ಕ್ರ. ಸಂ. | ವಿವರ | ದಿನಾಂಕ | ಸಮಯ |
|---|---|---|---|
| 1. | ಅರ್ಜಿದಾರರು ಸಂಧಾನದ ಅರ್ಜಿಯೊಂದಿಗೆ ಅರ್ಜಿ ಶುಲ್ಕ ಹಾಗೂ ಇಎಂಡಿ ಶುಲ್ಕದ ಮೂಲ ಡಿ.ಡಿ.ಗಳನ್ನು ಹಾಗೂ ಅಗತ್ಯ ದಾಖಲಾತಿಗಳ ಪ್ರತಿಗಳನ್ನು ಮುಚ್ಚಿದ ಲಕೋಟೆಯಲ್ಲಿ ಮಂಡ್ಯ ವಿಭಾಗೀಯ ಕಛೇರಿಯ ಟೆಂಡರ್ ಬಾಕ್ಸ್‌ನಲ್ಲಿ ಕಛೇರಿ ಸಮಯದಲ್ಲಿ ಸಲ್ಲಿಸಲು ಕಡೆಯ ದಿನಾಂಕ ಮತ್ತು ಸಮಯ (ಪ್ರತಿ ಶನಿವಾರ 13.30ರ ನಂತರ, ಸರ್ಕಾರಿ ರಜೆ & ವಾರದ ರಜೆ ಅಂದು ಹೊರತುಪಡಿಸಿ ಉಳಿದ ದಿನಗಳಲ್ಲಿ ಸಲ್ಲಿಸುವುದು.) | ದಿ:21.09.2023ರ ಸಮಯ 10.30 ರಿಂದ ದಿ:22.09.2023ರ ಸಮಯ 17.00 ರವರೆಗೆ | |
| 2. | ಸಂಧಾನ ನಡೆಸುವ ದಿನಾಂಕ ಮತ್ತು ಸಮಯ(ಮೂಲ ಪ್ರತಿಗಳೊಂದಿಗೆ ಹಾಜರಾಗುವುದು)(ಸೂಚನೆ:ವಾಣಿಜ್ಯ ಮಳಿಗೆಗಳ ಸಂಧಾನ ಮುಗಿದ ನಂತರ ನಡೆಸಲಾಗುವುದು) | ದಿ:26.09.2023 | 12.00m |

ಸಂಧಾನದ ದಸ್ತಾವೇಜುಗಳನ್ನು ನಿಗಮದ ವೆಬ್ ಸೈಟ್ "https://ksrtc.karnataka.gov.in" ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ ಮಂಡ್ಯ ವಿಭಾಗ, ಮಂಡ್ಯ ಇಲ್ಲಿ ಸಂಪರ್ಕಿಸಲು ಕೋರಲಾಗಿದೆ ಮತ್ತು ಸಂಪರ್ಕಿಸುವ ದೂರವಾಣಿ ಸಂಖ್ಯೆ–7760990652, 7760990661, 7337680837ಗಳಿಗೆ ಕರೆ ಮಾಡಬಹುದಾಗಿದೆ.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ, ಮಂಡ್ಯ ವಿಭಾಗ, ಮಂಡ್ಯ.

ಗೌರವ ಪೂರ್ವಕವಾಗಿ ಪ್ರತಿಯನ್ನು:–

1. ಮುಖ್ಯ ಸಂಚಾರ ವ್ಯವಸ್ಥಾಪಕರು, ಕೇಂದ್ರ ಕಛೇರಿ, ಬೆಂಗಳೂರುರವರಿಗೆ ಹಾಗೂ ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿರವರಿಗೆ ಮಾಹಿತಿಗಾಗಿ.
2. ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿ, ವಾ.ಕ.ರ.ಸಾ.ನಿ, ಈ.ಕ.ರ.ಸಾ.ನಿ, ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.

ಪ್ರತಿಯನ್ನು:–

1. ಘಟಕ ವ್ಯವಸ್ಥಾಪಕರು ಮಂಡ್ಯ, ಮದ್ದೂರು, ಮಳವಳ್ಳಿ, ನಾಗಮಂಗಲ, ಕೆ,ಆರ್.ಪೇಟೆ ಹಾಗೂ ಪಾಂಡವಪುರ ಇವರ ಮಾಹಿತಿಗಾಗಿ ಹಾಗೂ ಸದರಿ ಪ್ರತಿಯನ್ನು ಘಟಕದ & ಬಸ್ ನಿಲ್ದಾಣದ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಲು ಸೂಚಿಸಲಾಗಿದೆ. ಎಲ್ಲಾ ಘಟಕ ವ್ಯವಸ್ಥಾಪಕರುಗಳ ಮಾಹಿತಿಗಾಗಿ ಕಳುಹಿಸಲಾಗಿದೆ.
2. ವಿಭಾಗೀಯ ಸಂಚಲನಾಧಿಕಾರಿ/ ಕಾನೂನು ಅಧಿಕಾರಿ/ಸಹಾಯಕ ಭದ್ರತಾ & ಜಾಗೃತಾಧಿಕಾರಿ/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ಸಹಾಯಕ ಲೆಕ್ಕಾಧಿಕಾರಿ, ಮಂಡ್ಯ ವಿಭಾಗರವರ ಮಾಹಿತಿಗಾಗಿ ಮತ್ತು ಸಂಧಾನ ನಡೆಯುವ ಸಮಯದಲ್ಲಿ ಹಾಜರಿರಲು ತಿಳಿಸಲಾಗಿದೆ.

# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಮಂಡ್ಯ ವಿಭಾಗ

# KARNATAKA STATE ROAD TRANSPORT CORPORATION

## ಮಂಡ್ಯ ವಿಭಾಗದ ವ್ಯಾಪ್ತಿಯ ಬಸ್ ನಿಲ್ದಾಣ/ಘಟಕಗಳಲ್ಲಿ ಜಾಹೀರಾತ ಫಲಕಗಳನ್ನು ಅಳವಡಿಸಲು ಪ್ಯಾಕೇಜ್‌ಮಾದರಿಯಲ್ಲಿ ಐದು(05) ವರ್ಷದ ಅವಧಿಗೆ ಪರವಾನಿಗೆಗಾಗಿ ಸಂಧಾನದಲ್ಲಿ ಭಾಗವಹಿಸಲು ಷರತ್ತು ಮತ್ತು ನಿಬಂಧನೆಗಳು

1. ಸಂಧಾನದಲ್ಲಿ ಭಾಗವಹಿಸುವ ಬಿಡ್‌ದಾರರು ತಮ್ಮ ಸ್ವಂತ ಖರ್ಚಿನಲ್ಲಿ ಸಂಧಾನದ ನಿಯಮಾವಳಿಗಳನ್ನು ಪೂರೈಸುವುದು.
2. ಸಂಧಾನದಲ್ಲಿ ಭಾಗವಹಿಸುವ ಬಿಡ್‌ದಾರರು ಅರ್ಜಿ ಸಲ್ಲಿಸುವ ಮೊದಲು ತಮ್ಮ ಸ್ವಂತ ಖರ್ಚಿನಲ್ಲಿ ಆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ನಂತರವೇ ಬಿಡ್ ಮೊತ್ತ ದಾಖಲಿಸುವುದು, ಬಿಡ್‌ದಾರರ ಜವಾಬ್ದಾರಿಯಾಗಿರುತ್ತದೆ. ಸಂಧಾನ ಪ್ರಕ್ರಿಯೆ ಮುಗಿದ ನಂತರ ಯಾವುದೇ ಕಾರಣಕ್ಕೂ ನಿಗದಿತ ವ್ಯವಹಾರ/ಸ್ಥಳವನ್ನು ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
3. **ಬಿಡ್‌ದಾರರು ಜಿಎಸ್‌ಟಿ ಹೊರತುಪಡಿಸಿ ಮಾಸಿಕ ಪರವಾನಗಿ ಶುಲ್ಕವನ್ನು ಮಾತ್ರ ಬಿಡ್ ಮಾಡುವುದು. ಆಯ್ಕೆಯಾದ ಬಿಡ್‌ದಾರರು ಬಿಡ್ ಮೊತ್ತದ ಮೇಲೆ ನಿಗಧಿತ ಜಿಎಸ್‌ಟಿ ಶುಲ್ಕವನ್ನು ಪ್ರತ್ಯೇಕವಾಗಿ ಪ್ರತಿ ಮಾಹೆ ಪಾವತಿಸುವುದು. ಪ್ರಸ್ತುತ ಶೇ.18 ಜಿಎಸ್‌ಟಿನ್ನು ಮಾಸಿಕ ಪರವಾನಗಿ ಶುಲ್ಕದೊಂದಿಗೆ ಪಾವತಿಸಬೇಕು ಮತ್ತು ಸರ್ಕಾರ/ಸಂಬಂಧಪಟ್ಟ ಇಲಾಖೆಗಳು ಜಿಎಸ್‌ಟಿ ಮೊತ್ತದಲ್ಲಿ ಪರಿಷ್ಕರಣೆ ಮಾಡಿದಲ್ಲಿ ಅದರನ್ವಯ ಬದಲಾದ ಮೊತ್ತದ ಜಿಎಸ್‌ಟಿ ಪಾವತಿಸಲು ಬದ್ಧರಿರಬೇಕು.**
4. **ಬಿಡ್‌ದಾರರು ಒಂದು ವೇಳೆ ಜಿಎಸ್‌ಟಿ/ತೆರಿಗೆಯನ್ನು ಸೇರಿಸಿ ಬಿಡ್ ಮಾಡಿದ್ದಲ್ಲಿ ಅಂತಹ ಬಿಡ್‌ನ್ನು ಅಂಗೀಕರಿಸಲಾಗುವುದಿಲ್ಲ.**
5. **ಸಂಧಾನದ ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ. ಮೊತ್ತ:**

ಅ. ಬಿಡ್‌ದಾರರು ನಿಗದಿತ ಅರ್ಜಿ ಶುಲ್ಕದ ಮೊತ್ತವನ್ನು ಮತ್ತು ನಿಗಧಿತ ಇಎಂಡಿ ಮೊತ್ತದ ಡಿ.ಡಿ.ಗಳನ್ನು "Divisional Controller, K.S.R.T.C., Mandya Division, Mandya" ಇವರ ಹೆಸರಿಗೆ ರಾಷ್ಟ್ರೀಕೃತ/ಶೆಡ್ಯೂಲ್ ಬ್ಯಾಂಕ್‌ನಿಂದ ಡಿ.ಡಿ. ರೂಪದಲ್ಲಿ ಪ್ರತ್ಯೇಕವಾಗಿ ಪಡೆದು, ಸ್ವ-ಹಸ್ತದಿಂದ ಬರೆದ ಅರ್ಜಿ ಹಾಗೂ ಅಗತ್ಯ ದಾಖಲಾತಿಗಳೊಂದಿಗೆ ಮುಚ್ಚಿದ ಲಕೋಟೆಯಲ್ಲಿ ಟೆಂಡರ್ ಬಾಕ್ಸ್‌ನಲ್ಲಿ ನಿಗಧಿತ ದಿನಾಂಕ ಹಾಗೂ ಸಮಯದೊಳಗೆ ಹಾಕುವುದು. ತಪ್ಪಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಅಲ್ಲದೆ ಇದೇ ರೀತಿ ಮರುಕಳಿಸಿದ್ದಲ್ಲಿ ಅಂತಹ ಅರ್ಜಿದಾರರನ್ನು/ಬಿಡ್‌ದಾರರನ್ನು 2 ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್/ಸಂಧಾನದಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು. ಸಂಧಾನ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅರ್ಜಿದಾರರು ಚಾಲ್ತಿಯಲ್ಲಿರುವ ತಮ್ಮ ಮೊಬೈಲ್/ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸುವುದು. ಅರ್ಜಿ ಶುಲ್ಕವನ್ನು ಹಿಂತಿರುಗಿಸಲಾಗುವುದಿಲ್ಲ. ಇತರೆ ಮೂಲ ದಾಖಲಾತಿಗಳನ್ನು ಸಂಧಾನದಲ್ಲಿ ಪರಿಶೀಲನೆಗೆ ಹಾಜರುಪಡಿಸುವುದು.

ಆ. ನಿಗದಿಪಡಿಸಿದ ಮಾಸಿಕ ಮಿತವ್ಯಯ ಪರವಾನಗಿ ಶುಲ್ಕದ ಮೂರು(03)ಪಟ್ಟು ಮೊತ್ತವನ್ನು ಇ.ಎಂ.ಡಿ. (Earnest Money Deposit)ಯನ್ನಾಗಿ ನಿಗಧಿಪಡಿಸಲಾಗಿರುತ್ತದೆ.

ಇ. ಸಂಧಾನ ಪ್ರಕಟಣೆಯಲ್ಲಿ ನಿಗದಿಪಡಿಸಿರುವ ಇ.ಎಂ.ಡಿ.ಮೊತ್ತಕ್ಕೆ, ಸಂಧಾನ ಪ್ರಕಟಣೆಯ ದಿನಾಂಕದ ಅವಧಿಯಲ್ಲಿ ಪಡೆದುಕೊಂಡಿರುವ ಡಿ.ಡಿ.ಯನ್ನು ಮಾತ್ರ ಪರಿಗಣಿಸಲಾಗುವುದು.

ಈ. ಇ.ಎಂ.ಡಿ. ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.

6. ಬಿಡ್ಡುದಾರರು ನಮೂದಿಸಿರುವ ಪೂರ್ಣ ಪ್ಯಾಕೇಜನ್ನು ಬಿಡ್ಡು ಮಾಡುವುದು. ಅಪೂರ್ಣ ಬಿಡ್ಡನ್ನು ಪರಿಗಣಿಸಲಾಗುವುದಿಲ್ಲ.
7. ಬಿಡ್ಡುದಾರರು ಪ್ಯಾಕೇಜಿನಲ್ಲಿ ಬಿಡ್ಡು ಮಾಡಿರುವ ಅತೀ ಹೆಚ್ಚಿನ ದರ/ಮಾಸಿಕ ಪರವಾನಿಗೆ ಶುಲ್ಕ ನಮೂದಿಸಿರುವುದನ್ನು H1 ಬಿಡ್ಡು ಮೊತ್ತವನ್ನಾಗಿ ಪರಿಗಣಿಸಲಾಗುವುದು.
8. ಸಂಧಾನ ಪ್ರಕಟಣೆಯಲ್ಲಿ ಜಾಹಿರಾತು ಅಳವಡಿಸುವ ಸಂಬಂಧಿಸಿದ ವಿವರಗಳನ್ನು ಸಂಪೂರ್ಣವಾಗಿ ಓದಿ ಅರ್ಥೈಸಿಕೊಂಡಿರುವ ಬಗ್ಗೆ ಹಾಗೂ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಒಪ್ಪಿರುವ ಬಗ್ಗೆ ಷರತ್ತು ಮತ್ತು ನಿಬಂಧನೆಗಳ ಪ್ರತಿಯಲ್ಲಿ, ಬಿಡ್‌ದಾರರು/ ಅರ್ಜಿದಾರರು ಸಹಿ ಮಾಡಿ, ಸಲ್ಲಿಸುವುದು.
9. ಬಿಡ್‌ದಾರರ/ಅರ್ಜಿದಾರರ ಷರತ್ತಿನ ಸಂಧಾನ/ಟೆಂಡರ್‌ಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ. ಯಾವುದೇ ಷರತ್ತುಗಳು ಇಲ್ಲದೆ ಸಂಧಾನದ ನಿಯಮಗಳನ್ನು ಪಾಲಿಸಿರುವ ಅರ್ಹ ಬಿಡ್‌ದಾರರನ್ನು ಮಾತ್ರ ಅಂಗೀಕರಿಸಲಾಗುವುದು.
10. ಸಂಧಾನದಲ್ಲಿ ಭಾಗವಹಿಸುವ ಬಿಡ್‌ದಾರರು/ಅರ್ಜಿದಾರರು ಅಗತ್ಯ ಎಲ್ಲಾ ದಾಖಲಾತಿಗಳ ಜೆರಾಕ್ಸ್ ಪ್ರತಿಯನ್ನು ಸಂಧಾನದ ದಿನಾಂಕ / ಸಮಯದೊಳಗೆ ಸಿದ್ಧಪಡಿಸಿಕೊಂಡು ಸಂಧಾನದ ಸಮಯದಲ್ಲಿ ಸಲ್ಲಿಸುವುದು.
11. ಸಂಧಾನದ ಮೂಲಕ ಭಾಗವಹಿಸಿ ಅತಿ ಹೆಚ್ಚಿನ ಮೊತ್ತವನ್ನು ಬಿಡ್ ಮಾಡಿರುವ ಮತ್ತು ಸಮರ್ಪಕ ದಾಖಲೆಗಳನ್ನು ಸಲ್ಲಿಸಿರುವ ಬಿಡ್‌ದಾರರನ್ನು ಪರವಾನಗಿದಾರರನ್ನಾಗಿ ಆಯ್ಕೆ ಮಾಡಲಾಗುವುದು.

**12.** ಭಾರತ ಸರ್ಕಾರ/ಕರ್ನಾಟಕ ಸರ್ಕಾರ/ಕರಾರಸಾನಿಗಮವು ಆಗಿಂದಾಗ್ಗೆ ವಿಧಿಸುವ/ಕಾಲ ಕಾಲಕ್ಕೆ ಬದಲಾಗುವ ಷರತ್ತು/ನಿಬಂಧನೆಗಳಿಗೆ ಇದಕ್ಕೆ ಸಂಬಂಧಿಸಿದಂತೆ ಹೊಸದಾಗಿ ಸೇರ್ಪಡೆಯಾಗುವ ಯಾವುದೇ ಕಾನೂನುಗಳಿಗೆ ಪರವಾನಗಿದಾರರು ಬದ್ಧರಾಗಿರಬೇಕು

**13.** ಬಿಡ್‌ದಾರರು/ಅರ್ಜಿದಾರರು ಕೆಳಕಂಡ ಅಗತ್ಯ ದಾಖಲೆಗಳನ್ನು ಸಂಧಾನದಲ್ಲಿ ಸಲ್ಲಿಸಬೇಕಿರುತ್ತದೆ.

| ರೂ.5.00 ಲಕ್ಷಗಳಿಗಿಂತ ಕಡಿಮೆ ಮಾಸಿಕ ಪರವಾನಗಿ ಶುಲ್ಕವಿರುವ ಜಾಹೀರಾತು ಪ್ಯಾಕೇಜ್‌ಗಳಿಗೆ | ರೂ.5.00 ಲಕ್ಷ ಅಥವಾ ಹೆಚ್ಚಿನ ಮಾಸಿಕ ಪರವಾನಗಿ ಶುಲ್ಕವಿರುವ ಜಾಹೀರಾತು ಪ್ಯಾಕೇಜ್‌ಗಳಿಗೆ |
|---|---|
| ಅ) ವಿಳಾಸ ದೃಢೀಕರಣ ಪತ್ರ (Voter ID, Aadhaar Card, Passport, etc.)<br>ಆ) ಬಿಡ್‌ದಾರರು ಪಾಲುದಾರಿಕೆ ವ್ಯವಹಾರ ಸಂಸ್ಥೆಯನ್ನು ಹೊಂದಿದ್ದಲ್ಲಿ, ಭಾರತೀಯ ಪಾಲುದಾರಿಕೆ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿ, ಬಿಡ್ ಸಹಿಗೊಳಿಸುವ ವ್ಯಕ್ತಿಯು ಪಾಲುದಾರಿಕೆಯ ಸಂಸ್ಥೆಯಲ್ಲಿ ವ್ಯವಸ್ಥಾಪಕ ಪಾಲುದಾರನಾಗಿರುವ ಬಗ್ಗೆ ದಾಖಲಾತಿಯನ್ನು ಸಲ್ಲಿಸಬೇಕು. ಪಾಲುದಾರಿಕೆಯಲ್ಲಿರುವ ಎಲ್ಲಾ ನಿರ್ದೇಶಕರು / ಪಾಲುದಾರರ ಪೂರ್ಣ ವಿಳಾಸದ ಮಾಹಿತಿಯನ್ನು ಸಲ್ಲಿಸಬೇಕು.<br>ಇ) ಬಿಡ್‌ದಾರರು ಕಂಪನಿ / ವ್ಯವಹಾರ ಸಂಸ್ಥೆಯ ಹೆಸರಿನಲ್ಲಿ ಬಿಡ್ ಮಾಡಿದ್ದಲ್ಲಿ, ಕಂಪನಿಯು ಇಂಡಿಯನ್ ಕಂಪನೀಸ್ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿಯನ್ನು ಸಲ್ಲಿಸಬೇಕು.<br>ಈ) ಬಿಡ್‌ದಾರರು ಕ.ರಾ.ರ.ಸಾ.ನಿಗಮ ಮತ್ತು ಇತರೆ ನಿಗಮಗಳಲ್ಲಿ Defaulter ಆಗದೆ ಇರುವ ಬಗ್ಗೆ ಹಾಗೂ ಕಪ್ಪುಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ಸ್ವಯಂ-ದೃಢೀಕರಣ ಪತ್ರ (ಅನುಭಂದ–1 (Annexure-1)ನ್ನು ಭರ್ತಿಗೊಳಿಸಿ ಅಪಲೋಡ್ ಮಾಡುವುದು.)<br>ಉ) ಪಾನ್ ಕಾರ್ಡ್ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. | ಅ) ಕಂಪನಿ / ವ್ಯಕ್ತಿಯ ವಿಳಾಸ ದೃಢೀಕರಣ ಪತ್ರ (Voter ID, Aadhaar Card, Bank Passbook, Passport, etc)<br>ಆ) ಆದಾಯ ತೆರಿಗೆ ತೀರುವಳಿ ಪತ್ರ.<br>ಇ) ನಿಗದಿತ ಮಾಸಿಕ ಪರವಾನಗಿ ಶುಲ್ಕಕ್ಕಿಂತ ಹೆಚ್ಚಿನ ವಹಿವಾಟು ನಡೆಸಿರುವ ಬಗ್ಗೆ, 02 ವರ್ಷದ ವಾರ್ಷಿಕ ವಹಿವಾಟಿನ ದಾಖಲೆಗಳನ್ನು ಲೆಕ್ಕಪರಿಶೋಧಕರಿಂದ ದೃಢೀಕರಿಸಿ ನೀಡುವುದು.<br>ಈ) ಬಿಡ್‌ದಾರರು ಪಾಲುದಾರಿಕೆ ವ್ಯವಹಾರ ಸಂಸ್ಥೆಯನ್ನು ಹೊಂದಿದ್ದಲ್ಲಿ, ಭಾರತೀಯ ಪಾಲುದಾರಿಕೆ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿ, ಬಿಡ್ ಸಹಿಗೊಳಿಸುವ ವ್ಯಕ್ತಿಯು ಪಾಲುದಾರಿಕೆಯ ಸಂಸ್ಥೆಯಲ್ಲಿ ವ್ಯವಸ್ಥಾಪಕ ಪಾಲುದಾರನಾಗಿರುವ ಬಗ್ಗೆ ದಾಖಲಾತಿಯನ್ನು ಸಲ್ಲಿಸಬೇಕು. ಪಾಲುದಾರಿಕೆಯಲ್ಲಿರುವ ಎಲ್ಲಾ ನಿರ್ದೇಶಕರು / ಪಾಲುದಾರರ ಪೂರ್ಣ ವಿಳಾಸದ ಮಾಹಿತಿಯನ್ನು ಸಲ್ಲಿಸಬೇಕು.<br>ಉ) ಬಿಡ್‌ದಾರರು ಕಂಪನಿ / ವ್ಯವಹಾರ ಸಂಸ್ಥೆಯ ಹೆಸರಿನಲ್ಲಿ ಬಿಡ್ ಮಾಡಿದ್ದಲ್ಲಿ, ಕಂಪನಿಯು ಇಂಡಿಯನ್ ಕಂಪನೀಸ್ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿಯನ್ನು ಸಲ್ಲಿಸಬೇಕು.<br>ಊ) ವಹಿವಾಟಿಗೆ ಪೂರಕವಾಗಿ ಕಳೆದ 02 ವರ್ಷದ ಲಾಭ / ನಷ್ಟದ ಲೆಕ್ಕಾಚಾರದ ದಾಖಲೆಗಳು ಮತ್ತು ಬ್ಯಾಲೆನ್ಸ್ ಶೀಟ್ ಪ್ರತಿಗಳನ್ನು ಲೆಕ್ಕಪರಿಶೋಧಕರಿಂದ ದೃಢೀಕರಿಸಿ ನೀಡುವುದು.<br>ಋ) ಬಿಡ್‌ದಾರರು ಕ.ರಾ.ರ.ಸಾ.ನಿಗಮ ಮತ್ತು ಇತರೆ ನಿಗಮಗಳಲ್ಲಿ Defaulter ಆಗದೆ ಇರುವ ಬಗ್ಗೆ ಹಾಗೂ ಕಪ್ಪುಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ಸ್ವಯಂ ದೃಢೀಕರಣ ಪತ್ರ(ಅನುಭಂದ–1 (Annexure-1)ನ್ನು ಭರ್ತಿಗೊಳಿಸಿ ಅಪಲೋಡ್ ಮಾಡುವುದು.) |

| **ಕ್ರಸಂ** | **ಅರ್ಜಿಯೊಂದಿಗೆ ಸಲ್ಲಿಸಬೇಕಾದ ಮಾಡಬೇಕಾಗಿರುವ ದಾಖಲಾತಿಗಳು** |
|---|---|
| 1 | ಅರ್ಜಿ ಶುಲ್ಕದ ಡಿ.ಡಿ. |
| 2 | ಇ.ಎಂ.ಡಿ ಮೊತ್ತದ ಡಿ.ಡಿ |
| 3 | ಕಪ್ಪುಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ಸ್ವಯಂ ದೃಢೀಕರಣ ಪತ್ರ ಅನುಭಂದ–1 **(Annexure-1)** |
| 4 | **ಪಾನ್ ಕಾರ್ಡ್** |
| 5 | **ಆಧಾರ್ ಕಾರ್ಡ್/ವೋಟರ್ ಐಡಿ/ಪಾಸ್ ಪೋರ್ಟ್.** |
| 6 | **ಷರತ್ತು ನಿಬಂಧನೆಗಳನ್ನು ಓದಿ ಸಹಿ ಮಾಡಿ ಸಲ್ಲಿಸುವುದು.** |

**14.** **ಪರವಾನಗಿ ಅವಧಿ: ಐದು(05) ವರ್ಷ.**

**15.** **ಭದ್ರತಾ ಠೇವಣಿ:**

i. ಕೆಳಕಂಡಂತೆ ನಿಗದಿತ ಭದ್ರತಾ ಠೇವಣಿ ಮೊತ್ತವನ್ನು ರಾಷ್ಟ್ರೀಕೃತ / ಶೆಡ್ಯೂಲ್ ಬ್ಯಾಂಕ್‌ನಿಂದ ಪಡೆದ ಡಿ.ಡಿ. / RTGS / NEFTಮೂಲಕ ಪಾವತಿ ಮಾಡುವುದು.

| **ಕ್ರ.ಸಂ.** | **ಪರವಾನಗಿ ಅವಧಿ** | **ಒಟ್ಟು ಪಾವತಿಸಬೇಕಿರುವ ಭದ್ರತಾ ಠೇವಣಿ** |
|---|---|---|
| 1 | 05 ವರ್ಷ | ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 8 ಪಟ್ಟು |

ii. ಪರವಾನಗಿದಾರರು RTGS / NEFT ಮೂಲಕ ಪಾವತಿ ಮಾಡುವಾಗ ವ್ಯವಹಾರ ಮತ್ತು ಪರವಾನಗಿದಾರರ ಹೆಸರನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

iii. ಭದ್ರತಾ ಠೇವಣಿ ಮೊತ್ತವನ್ನು ಡಿ.ಡಿ. ರೂಪದಲ್ಲಿ ಸಲ್ಲಿಸುವಾಗ Divisional Controller, K.S.R.T.C, Mandya Division, Mandya ರವರ ಪದನಾಮಕ್ಕೆ ಡಿ.ಡಿ.ಪಡೆದು ಈ ಕಛೇರಿಗೆ ಸಲ್ಲಿಸುವುದು.

iv. ಭದ್ರತಾ ಠೇವಣಿಗೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.

v. ಆಯ್ಕೆಗೊಂಡ ಪರವಾನಗಿದಾರರ ಇ.ಎಂ.ಡಿ. ಮೊತ್ತವನ್ನು ಭದ್ರತಾ ಠೇವಣಿ ಮೊತ್ತಕ್ಕೆ ಹೊಂದಾಣಿಕೆ ಮಾಡಿಕೊಂಡು, ಉಳಿಕೆ ಮೊತ್ತವನ್ನು ಪಾವತಿಸಿಕೊಳ್ಳಲಾಗುವುದು.

vi. ಪರವಾನಗಿ ಅವಧಿ ಮುಕ್ತಾಯವಾದ ನಂತರ ನಿಗಮಕ್ಕೆ ಪಾವತಿಸಬೇಕಾದ ಬಾಕಿ ಶುಲ್ಕಗಳನ್ನು ಕಡಿತಗೊಳಿಸಿ ಉಳಿದ ಭದ್ರತಾ ಠೇವಣಿಯನ್ನು ಪರವಾನಗಿದಾರರಿಗೆ ಹಿಂತಿರುಗಿಸಲಾಗುವುದು.

**16.ಕರಾರು ಒಪ್ಪಂದ:**

ಅ)ಸಂಧಾನದಲ್ಲಿ ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ ದಿನಾಂಕದಿಂದ 15 ದಿನಗಳೊಳಗಾಗಿ ನಿಗದಿತ ಭದ್ರತಾ ಠೇವಣಿ ಮತ್ತು ಒಂದು ತಿಂಗಳ ಮುಂಗಡ ಮಾಸಿಕ ಪರವಾನಗಿ ಶುಲ್ಕವನ್ನು ಪಾವತಿಸಿ, ಕರ್ನಾಟಕ ಸ್ಟ್ಯಾಂಪ್ ಕಾಯಿದೆ ಪ್ರಕಾರ ಸೂಕ್ತ ಮೌಲ್ಯದ ಛಾಪಾ ಕಾಗದದ ಮೇಲೆ ಕರಾರು ಒಪ್ಪಂದ ಮಾಡಿಕೊಳ್ಳಬೇಕು.

ಆ) ಸಂಧಾನದಲ್ಲಿ ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ ದಿನಾಂಕದಿಂದ 15 ದಿನಗಳೊಳಗಾಗಿ ನಿಗದಿತ ಭದ್ರತಾ ಠೇವಣಿ ಮತ್ತು ಒಂದು ತಿಂಗಳ ಮುಂಗಡ ಮಾಸಿಕ ಪರವಾನಗಿ ಶುಲ್ಕವನ್ನು ಪಾವತಿಸಿ, ಕರ್ನಾಟಕ ಸ್ಟ್ಯಾಂಪ್ ಕಾಯಿದೆ ಪ್ರಕಾರ ಸೂಕ್ತ ಮೌಲ್ಯದ ಛಾಪಾ ಕಾಗದದ ಮೇಲೆ ಕರಾರು ಒಪ್ಪಂದ ಮಾಡಿಕೊಳ್ಳಬೇಕು.

ಇ) ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ 15 ದಿನಗಳೊಳಗೆ ಕರಾರು ಒಪ್ಪಂದ ಮಾಡಿಕೊಳ್ಳುವಲ್ಲಿ ವಿಫಲರಾದಲ್ಲಿ, ಸದರಿ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ನಿಗಮಕ್ಕೆ ಆದ ನಷ್ಟಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**ಈ) ಕರಾರು ಒಪ್ಪಂದ ಮಾಡಿಕೊಂಡು ವ್ಯವಹಾರ ನಡೆಸದೆ ಇದ್ದಲ್ಲಿ ಅಂತಹ ಪರವಾನಿಗೆದಾರರ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು** ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಸಂಧಾನ/ಟೆಂಡರ್‌ನಲ್ಲಿ ಭಾಗವಹಿಸದಂತೆ ಸದರಿ ಪರವಾನಗಿದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗುವುದು.

**17.ಮಾಸಿಕ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ (GST) ಪಾವತಿ:**

I. ಪರವಾನಗಿದಾರರು ಕರಾರು ಒಪ್ಪಂದ ಪ್ರಾರಂಭದ ಮಾಹೆಯ ಮುಂಗಡ ಮಾಸಿಕ ಪರವಾನಗಿ ಶುಲ್ಕವನ್ನು ಡಿ.ಡಿ. ಮೂಲಕ ಭದ್ರತಾ ಠೇವಣಿ ಜೊತೆ ಸಲ್ಲಿಸುವುದು.

II. ಪರವಾನಗಿದಾರರು ಪ್ರತಿ ಮಾಹೆ 07 ನೇ ತಾರೀಖಿನೊಳಗಾಗಿ ಮಾಸಿಕ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ (GST)ಶುಲ್ಕವನ್ನು, ಪ್ರಸ್ತುತ ಶೇ.18, ಮುಂಗಡವಾಗಿ ನಿಗಮಕ್ಕೆ ಪಾವತಿಸಬೇಕು.

III. ಪರವಾನಗಿದಾರರು ಮಾಸಿಕ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಪಾವತಿಸಲು ಇನ್‌ವಾಯ್ಸ್ ಅನ್ನು ಪ್ರತಿ ತಿಂಗಳ 3ನೇ ತಾರೀಖಿನೊಳಗೆ ಪಡೆದುಕೊಳ್ಳುವುದು.

IV. ಇನ್‌ವಾಯ್ಸ್‌ನಲ್ಲಿ ನಮೂದಿಸಿದ ಪೂರ್ಣ ಮೊತ್ತವನ್ನು ಪರವಾನಗಿದಾರರು ಪಾವತಿಸಬೇಕಿರುತ್ತದೆ. ಒಂದು ವೇಳೆ ಇನ್‌ವಾಯ್ಸ್ ಮೊತ್ತ ಪಾವತಿಸಲು ಪರವಾನಗಿದಾರರು ತಡಮಾಡಿದಲ್ಲಿ, ಬಾಕಿ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಮೇಲೂ ವಾರ್ಷಿಕ ಶೇ.18ರಷ್ಟು ಬಡ್ಡಿಯನ್ನು ಕನಿಷ್ಠ ರೂ.100/– ರಂತೆ, ವಿಳಂಬದ ದಿನಗಳ ಲೆಕ್ಕದಲ್ಲಿ ವಿಧಿಸಲಾಗುವುದು.

V. ಪರವಾನಗಿದಾರರು GST ನೊಂದಣಿ ಮತ್ತು ಇದಕ್ಕೆ ಪೂರಕವಾದ ದಾಖಲೆಗಳನ್ನು ಲಭ್ಯವಿದ್ದಲ್ಲಿ ಈ ಕಚೇರಿಗೆ ಸಲ್ಲಿಸುವುದು.

VI. ಮಾಸಿಕ ಪರವಾನಗಿಶುಲ್ಕವು ಪ್ರತಿ ವರ್ಷ ಶೇ.10 ರಷ್ಟು ಹೆಚ್ಚಳವಾಗುವುದು. ಇದಕ್ಕನುಗುಣವಾಗಿ ಸರಕು & ಸೇವಾ ತೆರಿಗೆಯು ಹೆಚ್ಚಳವಾಗುವುದು.

**18.ವಿದ್ಯುಚ್ಛಕ್ತಿ ಬಿಲ್ಲುಗಳ ಪಾವತಿ:**

ಆಯ್ಕೆಯಾಗುವ ಪರವನಿಗೆದಾರರು ಜಾಹೀರಾತುಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಅಳವಡಿಸಿಕೊಳ್ಳಬೇಕು.ಇದಕ್ಕಾಗಿ ಪ್ರತ್ಯೇಕವಾಗಿ ವಿದ್ಯುತ್‌ಚ್ಛಕ್ತಿ ಮೀಟರನ್ನು ಅಳವಡಿಸುವುದು.

ಪ್ರತಿ ಮಾಹೆಯ ವಿದ್ಯುಚ್ಛಕ್ತಿ ಬಿಲ್ಲುಗಳನ್ನು ನಿಗದಿತ ಸಮಯದಲ್ಲಿ ಪಾವತಿಸಬೇಕು.

**19.ಹೆಚ್ಚುವರಿ ಸ್ಥಳಾವಕಾಶ:**ಪರವಾನಗಿದಾರರು ಸಂಧಾನ/ಕರಾರು ಒಪ್ಪಂದದಲ್ಲಿ ನಮೂದಿಸಿದ ಸ್ಥಳದ ವಿಸ್ತೀರ್ಣಕ್ಕಿಂತ ಹೆಚ್ಚುವರಿ ಸ್ಥಳವನ್ನು ಅನಧಿಕೃತವಾಗಿ ಬಳಸಿಕೊಳ್ಳುವುದು ನಿಯಮ ಬಾಹಿರವಾಗಿರುತ್ತದೆ.

**20. ಅನಧಿಕೃತವಾಗಿ ಹೆಚ್ಚುವರಿ ಸ್ಥಳಾವಕಾಶದ ಬಳಕೆ:**

ಪರವಾನಗಿದಾರರು ಅನಧಿಕೃತವಾಗಿ ಬಳಸಿದ ಹೆಚ್ಚುವರಿ ಸ್ಥಳಾವಕಾಶವನ್ನು ನೋಟಿಸ್ ನೀಡಿದ ಕೂಡಲೇ ತೆರವುಗೊಳಿಸಬೇಕು.ಇದಲ್ಲದೆ, ಪರವಾನಗಿದಾರರಿಗೆ ಕೆಳಕಂಡಂತೆ ದಂಡ ವಿಧಿಸಲಾಗುವುದು ಹಾಗೂ ಕರಾರನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

| | | |
|---|---|---|
| ಮೊದಲ ಬಾರಿಗೆ | ಉಪಯೋಗಿಸಿದ ಹೆಚ್ಚುವರಿ ಸ್ಥಳಕ್ಕೆ ಮಾಸಿಕ ಪರವಾನಗಿ ಶುಲ್ಕದ 3 ಪಟ್ಟು ಪ್ರೋರೇಟಾ ದರಕ್ಕನುಗುಣವಾಗಿ ದಂಡ ವಿಧಿಸಲಾಗುವುದು | ದಂಡವನ್ನು ಕನಿಷ್ಠ 1 ತಿಂಗಳು, ಗರಿಷ್ಠ ಉಪಯೋಗಿಸಿದ ಒಟ್ಟು ದಿನಗಳಿಗೆ ವಿಧಿಸಲಾಗುವುದು. |
| ಎರಡನೇ ಬಾರಿಗೆ ಹಾಗೂ ಪುನರಾವರ್ತನೆಗೊಂಡಲ್ಲಿ | ಉಪಯೋಗಿಸಿದ ಹೆಚ್ಚುವರಿ ಸ್ಥಳಕ್ಕೆ ಮಾಸಿಕ ಪರವಾನಗಿ ಶುಲ್ಕದ 5 ಪಟ್ಟು ಪ್ರೋರೇಟಾ ದರಕ್ಕನುಗುಣವಾಗಿ ದಂಡ ವಿಧಿಸಲಾಗುವುದು. ಇದಲ್ಲದೆ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು, ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ. | ದಂಡವನ್ನು ಕನಿಷ್ಠ 1 ತಿಂಗಳು, ಗರಿಷ್ಠ ಉಪಯೋಗಿಸಿದ ಒಟ್ಟು ದಿನಗಳಿಗೆ ವಿಧಿಸಲಾಗುವುದು. |

**21. ಇ.ಎಂ.ಡಿ. / ಭದ್ರತಾ ಠೇವಣಿ ಮೊತ್ತ ಮುಟ್ಟುಗೋಲು ಹಾಕಿಕೊಳ್ಳಲಾಗುವ / ಹಿಂದಿರುಗಿಸುವ ಸಂದರ್ಭಗಳು:**

1. ಸಂಧಾನದಲ್ಲಿ ನಿಗದಿತ ಮಾಸಿಕ ಪರವಾನಗಿ ಶುಲ್ಕಕ್ಕಿಂತ ಹೆಚ್ಚಿನ ಮೊತ್ತವನ್ನು H1 ಮತ್ತು H2 ಬಿಡ್‌ದಾರರು ನಮೂದಿಸಿದ ಸಂದರ್ಭದಲ್ಲಿ, H1 ಬಿಡ್‌ದಾರರು ಕರಾರು ಒಪ್ಪಂದ ಮಾಡಿಕೊಳ್ಳುವಲ್ಲಿ ಹಿಂದೆ ಸರಿದಲ್ಲಿ / ವಿಫಲರಾದಲ್ಲಿ, ಸದರಿಯವರ ಇ.ಎಂ.ಡಿ.ಯನ್ನು ಮುಟ್ಟುಗೋಲು ಹಾಕಿಕೊಂಡ ನಂತರ H2 ಬಿಡ್‌ದಾರರನ್ನು ಪರವಾನಗಿದಾರರಾಗಿ ಆಯ್ಕೆ ಮಾಡುವ ಹಕ್ಕನ್ನು ನಿಗಮವು ಕಾಯ್ದಿರಿಸಿದೆ. H2 ಬಿಡ್‌ದಾರರು ಕರಾರು ಒಪ್ಪಂದ ಮಾಡಿಕೊಳ್ಳುವಲ್ಲಿ ಹಿಂದೆ ಸರಿದಲ್ಲಿ/ವಿಫಲರಾದಲ್ಲಿ, ಸದರಿಯವರ ಇ.ಎಂ.ಡಿ.ಯನ್ನು ಮುಟ್ಟುಗೋಲು ಹಾಕಿಕೊಂಡು ನಂತರ ನಿಗದಿತ ಮಾಸಿಕ ಪರವಾನಗಿ ಶುಲ್ಕಕ್ಕಿಂತ ಹೆಚ್ಚಿನ ಮೊತ್ತ ಬಿಡ್ ಮಾಡಿದ H3 ಬಿಡ್‌ದಾರರನ್ನು ಸಹ ಪರವಾನಗಿದಾರರಾಗಿ ಆಯ್ಕೆ ಮಾಡುವ/ತಿರಸ್ಕರಿಸುವ ಹಕ್ಕನ್ನು ನಿಗಮವು ಕಾಯ್ದಿರಿಸಿದೆ.
2. ಸಂಧಾನದನಲ್ಲಿ ಅತಿ ಹೆಚ್ಚು ಮೊತ್ತವನ್ನು ಬಿಡ್‌ಮಾಡಿ ಪರವಾನಗಿದಾರರಾಗಿ ಆಯ್ಕೆಯಾದ ಬಿಡ್‌ದಾರರು ನಿಗದಿತ ದಿನಾಂಕದೊಳಗಾಗಿ ಭದ್ರತಾ ಠೇವಣಿ ಹಾಗೂ ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ಪಾವತಿಸಲು ವಿಫಲರಾದಲ್ಲಿ, ಅಂತಹ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
3. H2 ಮತ್ತು H3 ಬಿಡ್‌ದಾರರನ್ನು ಪರವಾನಗಿದಾರರಾಗಿ ಆಯ್ಕೆ ಮಾಡಿದಾಗ, ಅವರು ಕರಾರು ಒಪ್ಪಂದ ಮಾಡಿಕೊಳ್ಳಲು ವಿಫಲರಾದಲ್ಲಿ, ಅವರ ಇ.ಎಂ.ಡಿ. ಮೊತ್ತವನ್ನು ಸಹ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
4. ಒಂದು ವೇಳೆ ಆಯ್ಕೆಯಾದ ಬಿಡ್‌ದಾರರು ಭದ್ರತಾ ಠೇವಣಿ ಮತ್ತು ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ಪಾವತಿಸಿ, ನಿಗದಿತ ದಿನಾಂಕದೊಳಗಾಗಿ ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ವಿಫಲರಾದಲ್ಲಿ, ಅಂತಹ ಬಿಡ್‌ದಾರರ ಭದ್ರತಾ ಠೇವಣಿ ಹಾಗೂ ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**22. ಕರಾರು ರದ್ಧತಿಯ ಷರತ್ತುಗಳು:**

1. ಆಯ್ಕೆಯಾದ ಪರವಾನಗಿದಾರರು ಕನಿಷ್ಠ 02 ವರ್ಷಗಳ ಕಾಲ ಪರವಾನಗಿಯನ್ನು ನಡೆಸಬೇಕು.
2. ಪರವಾನಗಿದಾರರು ಒಂದು ವೇಳೆ 02 ವರ್ಷದೊಳಗೆ ಪರವಾನಗಿಯನ್ನು ರದ್ದುಪಡಿಸಿಕೊಳ್ಳಲು ಇಚ್ಛಿಸಿದಲ್ಲಿ, 06 ತಿಂಗಳ ಮುಂಚಿತವಾಗಿ ಮನವಿ ನೀಡಬೇಕು. ಮುಂಚಿತವಾಗಿ ಮನವಿ ನೀಡುವ ಸಮಯದಲ್ಲಿ ಯಾವುದೇ ಹಿಂಬಾಕಿ ಇರಬಾರದು. ಮನವಿ ನೀಡಿದ 06 ತಿಂಗಳ ಅವಧಿಯಲ್ಲಿ ಮಳಿಗೆಯನ್ನು ನಡೆಸಲು ಇಚ್ಛಿಸಿದಲ್ಲಿ, ಆಯಾ ತಿಂಗಳು ಮುಂಗಡವಾಗಿ ಪರವಾನಗಿ ಶುಲ್ಕ ಪಾವತಿಸಿಕೊಂಡು ನಡೆಸುವುದು.
3. ಪರವಾನಗಿದಾರರು ಒಂದು ವೇಳೆ 02 ವರ್ಷದ ನಂತರ ಪರವಾನಗಿಯನ್ನು ರದ್ದುಪಡಿಸಿಕೊಳ್ಳಲು ಇಚ್ಛಿಸಿದಲ್ಲಿ, 04 ತಿಂಗಳ ಮುಂಚಿತವಾಗಿ ಮನವಿ ನೀಡಬೇಕು. ಮುಂಚಿತವಾಗಿ ಮನವಿ ನೀಡುವ ಸಮಯದಲ್ಲಿ ಯಾವುದೇ ಹಿಂಬಾಕಿ ಇರಬಾರದು. ಮನವಿ ನೀಡಿದ 04 ತಿಂಗಳ ಅವಧಿಯಲ್ಲಿ ಮಳಿಗೆಯನ್ನು ನಡೆಸಲು ಇಚ್ಛಿಸಿದಲ್ಲಿ, ಆಯಾ ತಿಂಗಳು ಮುಂಗಡವಾಗಿ ಪರವಾನಗಿ ಶುಲ್ಕ ಪಾವತಿಸಿಕೊಂಡು ನಡೆಸುವುದು.
4. ಯಾವುದೇ ಕಾರಣ ನೀಡದೇ, 4 ತಿಂಗಳ ನೋಟಿಸ್ ನೀಡಿ ಮಳಿಗೆಯ ಪರವಾನಗಿಯನ್ನು ರದ್ದುಪಡಿಸಲು ನಿಗಮವು ಅಧಿಕಾರವನ್ನು ಹೊಂದಿರುತ್ತದೆ.
5. ಬಸ್ ನಿಲ್ದಾಣಗಳ ನವೀಕರಣ ಕಾಮಗಾರಿ / ಆವರಣವನ್ನು ಮೇಲ್ದರ್ಜೆಗೇರಿಸುವ / ದುರಸ್ತಿ ಕಾರ್ಯಗಳನ್ನು ಕೈಗೆತ್ತಿಕೊಳ್ಳುವ ಸಮಯದಲ್ಲಿ, ನಿಗಮವು ಪರವಾನಗಿದಾರರಿಗೆ ಒಂದು ತಿಂಗಳು ಮುಂಗಡ ನೋಟಿಸ್‌ನ್ನು ಜಾರಿ ಮಾಡಿ ಪರವಾನಗಿಯನ್ನು ರದ್ದುಪಡಿಸಲು ನಿಗಮವು ಅಧಿಕಾರವನ್ನು ಹೊಂದಿರುತ್ತದೆ.

**23. ಬಿಡ್‌ದಾರರ / ಪರವಾನಗಿದಾರರ ಹೆಸರನ್ನು ಕಪ್ಪುಪಟ್ಟಿಗೆ ಸೇರಿಸುವ ಸಂದರ್ಭಗಳು:**

1. ಸಂಧಾನದಲ್ಲಿ ಅರ್ಹಗೊಳ್ಳುವ ಸಲುವಾಗಿ ಬಿಡ್‌ದಾರರು / ಪರವಾನಗಿದಾರರು ಸಲ್ಲಿಸಿರುವ ದಾಖಲೆಗಳು ಯಾವುದೇ ಹಂತದಲ್ಲಿ ನೈಜತೆಯಿಂದ ಕೂಡಿಲ್ಲದಿರುವುದು ಕಂಡುಬಂದಲ್ಲಿ, ಅಂತಹ ಬಿಡ್‌ದಾರರ ಆಯ್ಕೆ/ಪರವಾನಗಿದಾರರ ಪರವಾನಗಿಯನ್ನು ರದ್ದುಪಡಿಸಿ, ನಿಗಮದಲ್ಲಿಟ್ಟಿರುವ ಇ.ಎಂ.ಡಿ./ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಅಂತಹ ಬಿಡ್‌ದಾರರನ್ನು/ಪರವಾನಗಿದಾರರನ್ನು ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಸಂಧಾನದಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.

2. ಬಿಡ್‌ದಾರರು ಬಿಡ್ ಹಿಂದಕ್ಕೆ ಪಡೆದಲ್ಲಿ ಅಥವಾ ತಿದ್ದುಪಡಿಗೊಳಿಸಿದಲ್ಲಿ ಅಥವಾ ಅಗೌರವ ತರುವಂತಹ ಸಂದರ್ಭಗಳಲ್ಲಿ, ಇ.ಎಂ.ಡಿ. ಮೊತ್ತ ಮುಟ್ಟುಗೋಲು ಹಾಕಿಕೊಂಡು, ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ. ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಸಂಧಾನ/ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.
3. ಎರಡು ವರ್ಷದ ಅವಧಿಯೊಳಗೆ ಯಾವುದೇ ಕಾರಣದಿಂದ ಪರವಾನಗಿ ರದ್ದುಗೊಳ್ಳುವಂತಹ ಮತ್ತು ಎರಡು ವರ್ಷದ ಅವಧಿಯೊಳಗೆ ಪರವಾನಗಿಯನ್ನು ರದ್ದುಪಡಿಸುವಂತೆ ಮನವಿ ಸಲ್ಲಿಸುವ ಪರವಾನಗಿದಾರರನ್ನು, ಮನವಿ ಸಲ್ಲಿಸಿದ ದಿನಾಂಕದಿಂದ ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ. ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು. ಒಂದು ವೇಳೆ ಪರವಾನಗಿ ರದ್ದತಿಯ ಜಾರಿಯ ದಿನಾಂಕವು ಕರಾರು ಒಪ್ಪಂದದ ಪ್ರಾರಂಭದ ದಿನಾಂಕದಿಂದ 02(ಎರಡು) ವರ್ಷಗಳಿಗೂ ಮೇಲ್ಪಟ್ಟಲ್ಲಿ ಅಂತಹ ಪರವಾನಗಿದಾರರಿಗೆ ಕಪ್ಪುಪಟ್ಟಿಗೆ ಸೇರಿಸುವುದರಿಂದ ವಿನಾಯಿತಿ ಇರುತ್ತದೆ.
4. ಪರವಾನಗಿ ಅವಧಿಯ ಯಾವುದೇ ಸಮಯದಲ್ಲಿ ಉಪ-ಪರವಾನಗಿಗೆ ನೀಡಿರುವುದು ಕಂಡು ಬಂದಲ್ಲಿ, ಪರವಾನಗಿಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದುಪಡಿಸಲಾಗುವುದು ಹಾಗೂ ಭದ್ರತಾ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು, ಕರಾರು ರದ್ದುಪಡಿಸಿದ ದಿನಾಂಕದಿಂದ ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಸಂಧಾನ/ಟೆಂಡರ್‌ನಲ್ಲಿ ಭಾಗವಹಿಸದಂತೆ ಸದರಿ ಪರವಾನಗಿದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗುವುದು.
5. ಕಪ್ಪು ಪಟ್ಟಿಗೆ ಸೇರಿದ ಪರವಾನಗಿದಾರರು ನಿಗಮದ ಯಾವುದೇ ಟೆಂಡರ್/ಸಂಧಾನದಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಅಂತಹ ಬಿಡ್‌ದಾರರು/ಅರ್ಜಿದಾರರು ಒಂದು ವೇಳೆ ಟೆಂಡರ್/ ಸಂಧಾನದಲ್ಲಿ ಭಾಗವಹಿಸಿದಲ್ಲಿ, ಯಾವುದೇ ಹಂತದಲ್ಲಿ ಅವರ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**24. <u>ಇತರೆ ಷರತ್ತು ನಿಯಮಗಳು :</u>**

a) ಸಂಧಾನದಲ್ಲಿ ಆಯ್ಕೆಯಾಗದ ಬಿಡ್‌ದಾರರುಗಳ (H1, H2 & H3 ಹೊರತುಪಡಿಸಿ) ಇ.ಎಂ.ಡಿ. ಮೊತ್ತವನ್ನು ಟೆಂಡರ್ ಅಂತಿಮಗೊಂಡ ನಂತರ ಹಿಂದಿರುಗಿಸಲಾಗುವುದು. H2 ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು H1 ಬಿಡ್‌ದಾರರು ಕರಾರು ಒಪ್ಪಂದ ಮಾಡಿಕೊಂಡ ನಂತರ ಹಿಂದಿರುಗಿಸಲಾಗುವುದು. H3 ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು H1 or H2 ಬಿಡ್‌ದಾರರು ಕರಾರು ಒಪ್ಪಂದ ಮಾಡಿಕೊಂಡ ನಂತರ ಹಿಂದಿರುಗಿಸಲಾಗುವುದು.

b) ಸಂಧಾನದನಲ್ಲಿ ಅತಿ ಹೆಚ್ಚು ಮೊತ್ತವನ್ನು ಬಿಡ್‌ಮಾಡಿ ಪರವಾನಗಿದಾರರಾಗಿ ಆಯ್ಕೆಯಾದ ಬಿಡ್‌ದಾರರು ನಿಗದಿತ ದಿನಾಂಕದೊಳಗಾಗಿ ಭದ್ರತಾ ಠೇವಣಿ ಹಾಗೂ ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ಪಾವತಿಸಲು ವಿಫಲರಾದಲ್ಲಿ, ಅಂತಹ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

c) ಒಂದು ವೇಳೆ ಆಯ್ಕೆಯಾದ ಬಿಡ್‌ದಾರರು ಭದ್ರತಾ ಠೇವಣಿ ಮತ್ತು ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ಪಾವತಿಸಿ, ನಿಗದಿತ ದಿನಾಂಕದೊಳಗಾಗಿ ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ವಿಫಲರಾದಲ್ಲಿ, ಅಂತಹ ಬಿಡ್‌ದಾರರ ಭದ್ರತಾ ಠೇವಣಿ ಹಾಗೂ ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

d) H2 ಮತ್ತು H3 ಬಿಡ್‌ದಾರರನ್ನು ಪರವಾನಗಿದಾರರಾಗಿ ಆಯ್ಕೆ ಮಾಡಿದಾಗ, ಅವರು ಕರಾರು ಒಪ್ಪಂದ ಮಾಡಿಕೊಳ್ಳಲು ವಿಫಲರಾದಲ್ಲಿ, ಅವರ ಇ.ಎಂ.ಡಿ. ಮೊತ್ತವನ್ನು ಸಹ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

e) ಪರವಾನಗಿ ಪಡೆದ ಪರವಾನಗಿದಾರರೇ ವ್ಯವಹಾರವನ್ನು ನಡೆಸುವುದು. ಉಪ ಪರವಾನಗಿಗೆ ನೀಡಲು ಅವಕಾಶವಿರುವುದಿಲ್ಲ.

f) ಆಯ್ಕೆಯಾದ ಪರವಾನಗಿದಾರರು ಜಾಹೀರಾತು ಅಳವಡಿಸುವ ಸಮಯದಲ್ಲಿ ವಾಹನಗಳ/ಸಾರ್ವಜನಿಕ ಪ್ರಯಾಣಿಕರ ಸಂಚಾರಕ್ಕೆ ಹಾಗೂ ಬಸ್ಸಿನ ಅಂದ-ಚೆಂದಕ್ಕೆ ಯಾವುದೇ ರೀತಿ ಅಡಚಣೆಯಾಗದಂತೆ ನಿಗಾ ವಹಿಸುವುದು. ಈ ಸಂಬಂಧ ವಿಭಾಗೀಯ ತಾಂತ್ರಿಕ ಅಭಿಯಂತರರ ಮೇಲ್ವಿಚಾರಣೆಯಲ್ಲಿ ಜಾಹೀರಾತು ಅಳವಡಿಸುವುದು. ನಿಗಮದ ಬಸ್ಸು/ಆಸ್ತಿ-ಪಾಸ್ತಿಗೆ ಧಕ್ಕೆ/ಹಾನಿ ಉಂಟಾದಲ್ಲಿ ಸದರಿ ಮೊತ್ತವನ್ನು ಪರವಾನಿಗೆದಾರರಿಂದ ವಸೂಲಿ ಮಾಡಲಾಗುವುದು.

g) ಪರವನಿಗೆದಾರರು ತಮ್ಮ ಪರವಾನಿಗೆ ಅವಧಿ ಮುಕ್ತಾಯವಾದ ನಂತರ ಜಾಹೀರಾತು ಪ್ರದರ್ಶಿಸುವ ಸಂಬಂಧ ಅಳವಡಿಸಿರುವ ಜಾಹೀರಾತುಗಳನ್ನು ನಿಗಮದ ಆಸ್ತಿಪಾಸ್ತಿಗೆ ಯಾವುದೇ ರೀತಿಯ ಹಾನಿಯಾಗದಂತೆ ತೆರವುಗೊಳಿಸಬೇಕು. ಒಂದು ವೇಳೆ ನಿಗದಿತ ಸಮಯದಲ್ಲಿ ತೆರವುಗೊಳಿಸದಿದಲ್ಲಿ, ನಿಗಮದ ವತಿಯಿಂದ ತೆರವುಗೊಳಿಸಲಾಗುವುದು ತೆರವುಗೊಳಿಸಲು ಅಗುವ ವೆಚ್ಚವನ್ನು ಪರವಾನಿಗೆದಾರರ ಭದ್ರತಾ ಠೇವಣಿಯಲ್ಲಿ ಮುರಿದುಕೊಳ್ಳಲಾಗುವುದು.

h) ಆಯ್ಕೆಗೊಂಡ ಪರವಾನಿಗೆದಾರರು ಎಲೆಕ್ಟ್ರಿಕಲ್ ಅಳವಡಿಕೆ/ಬೆಳಕಿನ ಅಳವಡಿಕೆ/ವೈರಿಂಗ್ ಇತ್ಯಾದಿ ಸುರಕ್ಷತಾ ಕ್ರಮಗಳ ಸಂಬಂಧ ನಿಗದಿತ ಪ್ರಾಧಿಕಾರಿಗಳಿಂದ ಪಡೆದ ದೃಡೀಕರಣ ಪತ್ರದ ಪ್ರತಿಯನ್ನು ಸಲ್ಲಿಸುವುದು. ವಿದ್ಯುತ್ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವುದು ಪರವಾನಿಗೆದಾರರ ಜವಾಬ್ದಾರಿಯಾಗಿರುತ್ತದೆ.

i) ಮುಷ್ಕರ / ಬಂದ್ ಅವಧಿಯಲ್ಲಿ ಮಾಸಿಕ ಪರವಾನಗಿ ಶುಲ್ಕದಲ್ಲಿ ರಿಯಾಯಿತಿಗೆ ಅವಕಾಶವಿರುವುದಿಲ್ಲ.

j) ಪರವಾನಗಿದಾರರು ತಮ್ಮ ವ್ಯವಹಾರಕ್ಕೆ ಸಂಬಂಧಿಸಿದ ಜಿ.ಎಸ್.ಟಿ., ಆದಾಯ ತೆರಿಗೆ, ಭವಿಷ್ಯ ನಿಧಿ, ಇ.ಎಸ್.ಐ, ಸೇಲ್ಸ್ ಟ್ಯಾಕ್ಸ್ ಕ್ಲಿಯರೆನ್ಸ್ ಪ್ರಮಾಣ ಪತ್ರ, ಟ್ರೇಡ್ ಲೈಸೆನ್ಸ್, ಲೇಬರ್ ಲೈಸೆನ್ಸ್, ಫುಡ್ ಲೈಸೆನ್ಸ್ ಇತ್ಯಾದಿ ಪ್ರಮಾಣಪತ್ರಗಳನ್ನು ಹೊಂದಿರಬೇಕು. ನಿಗಮವು & ಸರ್ಕಾರದ ಇತರ ಇಲಾಖೆಯವರು ದಾಖಲೆಗಳನ್ನು ಹಾಜರುಪಡಿಸಲು ಕೋರಿದ್ದಲ್ಲಿ ಸಂಬಂಧಿಸಿದ ದಾಖಲೆಗಳನ್ನು ಕೂಡಲೇ ಸಲ್ಲಿಸಬೇಕಾಗಿರುತ್ತದೆ ಹಾಗೂ ಸದರಿ ಮಾಹಿತಿಯೊಂದಿಗೆ ದಾಖಲೆಗಳ ಪ್ರತಿಗಳನ್ನು ಈ ಕಛೇರಿಗೂ ಸಲ್ಲಿಸುವುದು.

k) ಜಾಹೀರಾತು ಏಜೆನ್ಸಿಗೆ/ವ್ಯವಹಾರಕ್ಕೆ ಸಂಬಂಧಿಸಿದಂತೆ ಸ್ಥಳೀಯ ಇಲಾಖೆ / ಪ್ರಾಧಿಕಾರಗಳಿಂದ ಅನುಮತಿ ಪಡೆದು, ವಿಧಿಸುವ ತೆರಿಗೆಯನ್ನು ಪರವಾನಗಿದಾರರೇ ಸಂಬಂಧಿಸಿದ ಇಲಾಖೆ / ಪ್ರಾಧಿಕಾರಗಳಿಗೆ ಸಂದಾಯ ಮಾಡಲು ಜವಾಬ್ದಾರರಾಗಿರುತ್ತಾರೆ. ಸಂಬಂಧಿಸಿದ ದಾಖಲಾತಿಗಳನ್ನು ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಕಾಲ–ಕಾಲಕ್ಕೆ ಒದಗಿಸಬೇಕು.

l) ಆಯ್ಕೆಗೊಂಡ ಪರವಾನಗಿದಾರರು ಅಳವಡಿಸಲು ಪ್ರಸ್ತಾಪಿಸುವ ಹೋರ್ಡಿಂಗ್ಸ್‌ಗಳಿಗೆ ಬೆಂಬಲವಾಗಿ ನಿಲ್ಲಿಸುವ ವಿನ್ಯಾಸಗಳಿಗೆ (Structure) ನೊಂದಾಯಿತ ವಿನ್ಯಾಸ ಅಭಿಯಂತರರು/ ಸಂಬಂಧಿಸಿದ ಪ್ರಾಧಿಕಾರಗಳಿಂದ ದೃಢೀಕರಣವನ್ನು ಪಡೆದ ಪ್ರತಿಯನ್ನು ವಿಭಾಗೀಯ ನಿಯಂತ್ರಣಾಧಿಕಾರಿಯವರಿಗೆ ಪರಿಶೀಲನೆಗೆ ಸಲ್ಲಿಸುವುದು. ಒಂದು ವೇಳೆ ರಚನೆ / ವಿನ್ಯಾಸ / ಯೋಜನೆಯಲ್ಲಿ ನ್ಯೂನ್ಯತೆಯಿದ್ದಲ್ಲಿ 05 ದಿನಗಳೊಳಗೆ ಸರಿಪಡಿಸುವುದು. ಇಲ್ಲದಿದ್ದಲ್ಲಿ ನಿಗಮವು ನ್ಯೂನ್ಯತಾ ಕೆಲಸವನ್ನು ಅಥವಾ ಭಾಗವನ್ನು ತೆರವುಗೊಳಿಸಲು ಅಥವಾ ಸಂಬಂಧಿಸಿದ ಪರವಾನಿಗೆದಾರರಿಂದ ಮರುಪಾವತಿಸಿಕೊಳ್ಳಲಾಗುವುದು.

m) ಆಯ್ಕೆಗೊಂಡ ಪರವಾನಗಿದಾರರು, ನಿಗಮದ ಜಾಹೀರಾ0ತು ಪ್ಯಾಕೇಜ್ ಸಲುವಾಗಿ ಬಳಸಿಕೊಳ್ಳುವ ನೌಕರರು / ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯ ನಿಯಮಾವಳಿಗಳನ್ವಯ ಪಿ.ಎಫ್ / ಇಎಸ್ಐ ಸೌಲಭ್ಯ ವಿಸ್ತರಿಸಿರುವ ಬಗ್ಗೆ ಅಗತ್ಯ ದಾಖಲಾತಿ ಒದಗಿಸುವುದು. ಸಂಬಂಧಿಸದಿದ್ದಲ್ಲಿ ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸುವುದು.

n) ಆಯ್ಕೆಗೊಂಡ ಪರವಾನಗಿದಾರರು, ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ (Employees Provident Fund Organization) ರವರಲ್ಲಿ ನೊಂದಣಿ ಮಾಡಿಸಿಕೊಂಡಿರಬೇಕು. ನಿಗಮದ ಜಾಹೀರಾತು ಪ್ಯಾಕೇಜ್ ಸಲುವಾಗಿ ಬಳಸಿಕೊಳ್ಳುವ ನೌಕರರು / ಸಿಬ್ಬಂದಿಗಳಿಗೆ ಪ್ರತಿ ತಿಂಗಳು ಮಾಸಿಕ ಭವಿಷ್ಯ ನಿಧಿ ವಂತಿಕೆಯನ್ನು ಆರ್.ಸಿ.ಎಫ್.ಸಿ. ರವರಿಗೆ ಜಮಾ ಮಾಡಬೇಕು. ಸಂಬಂಧಿಸದಿದ್ದಲ್ಲಿ ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸುವುದು.

o) ಜಾಹೀರಾತಿನಲ್ಲಿ ಪ್ರದರ್ಶಿಸುವ ವಿವರಗಳು ಅಡ್ವರ್ಟೈಸಿಂಗ್ ಸ್ಟ್ಯಾಂಡರ್ಡ್ ಕೌನ್ಸಿಲ್ ಆಫ್ ಇಂಡಿಯಾರವರ ನಿರ್ದೇಶನಗಳಿಗೆ (ASCI CODE)ಒಳಪಟ್ಟಿರಬೇಕು. ಇದಕ್ಕೆ ಜಾಹೀರಾತುದಾರರು ಬದ್ದರಾಗಿರಬೇಕು.

p) ಜಾಹೀರಾತುಗಳಲ್ಲಿ ನಿಗಮ ಮತ್ತು ಸಹೋದರ ಸಂಸ್ಥೆಗಳ ವ್ಯವಹಾರಕ್ಕೆ ವ್ಯತಿರಿಕ್ತವಾದ ನಿಗಮಗಳ ಘನತೆಗೆ ಧಕ್ಕೆ ತರುವಂತಹ ಜಾಹೀರಾತುಗಳನ್ನು ಪ್ರದರ್ಶಿಸುವಂತಿಲ್ಲ.

q) ಜಾಹಿರಾತುಗಳನ್ನು ಕನ್ನಡದಲ್ಲಿಯೂ ಪ್ರದರ್ಶಿಸುವುದು.

r) ಪರವಾನಿಗೆದಾರರು ಬಾಲ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಳ್ಳುವಂತಿಲ್ಲ.

s) ಹರಾಜು/ಟೆಂಡರ್/ಸಂಧಾನ ಪ್ರಕಟಣೆಯಲ್ಲಿ ಆಯ್ಕೆಯಾದವರು ತಮ್ಮ ಸ್ವಂತ ಖರ್ಚಿನಲ್ಲಿ ಕರ್ನಾಟಕ ಸ್ಟಾಂಪ್ ಆಕ್ಟ್‌ನಂತೆ ಸ್ಟಾಂಪ್ ಶುಲ್ಕವನ್ನು ಭರಿಸಿ ಕರಾರು ಒಪ್ಪಂದ ಮಾಡಿಕೊಳ್ಳಬೇಕಾಗಿರುತ್ತದೆ.

t) ಸಂಧಾನದನಲ್ಲಿ ಭಾಗವಹಿಸುವ ಅರ್ಜಿದಾರರು/ಬಿಡ್‌ದಾರರು ನಿಗಮಕ್ಕೆ ಯಾವುದೇ ಷರತ್ತುಗಳನ್ನು ಹಾಕುವಂತಿಲ್ಲ, ನಿಗಮವು ಕಾಲಕಾಲಕ್ಕೆ ವಿಧಿಸುವ ಎಲ್ಲ ಷರತ್ತುಗಳನ್ನು ಒಪ್ಪಿಕೊಳ್ಳತಕ್ಕದಾಗಿರುತ್ತದೆ.

u) ಪರವಾನಿಗೆದಾರರು/ಬಿಡ್‌ದಾರರು ಕಡ್ಡಾಯವಾಗಿ ಪಾನ್‌ಕಾರ್ಡ್ ಹೊಂದಿರಬೇಕಾಗಿರುತ್ತದೆ.

v) ಯಾವುದೇ ಸಮಯದಲ್ಲಿ ಹೆಚ್ಚಿನ ಷರತ್ತು ಮತ್ತು ನಿಬಂಧನೆಗಳನ್ನು ಕರಾರಿನಲ್ಲಿ ಸೇರಿಸಲು ಮತ್ತು ಮಾರ್ಪಡಿಸಲು ನಿಗಮವು ಅಧಿಕಾರ ಹೊಂದಿರುತ್ತದೆ.

w) ಪರವಾನಗಿದಾರರು ಮತ್ತು ನಿಗಮದ ಮಧ್ಯೆ ಯಾವುದೇ ವ್ಯಾಜ್ಯ / ತಕರಾರು ಉಂಟಾದಲ್ಲಿ, ನಿಗಮದ ವ್ಯವಸ್ಥಾಪಕ ನಿರ್ದೇಶಕರು ಮಧ್ಯಸ್ಥಿಕೆದಾರರಾಗಿರುತ್ತಾರೆ. ಸದರಿಯವರ ತೀರ್ಮಾನವೇ ಅಂತಿಮವಾಗಿರುತ್ತದೆ.

x) ಕರಾರಿನಿಂದ ಉದ್ಭವಿಸಬಹುದಾದಂತಹ ಯಾವುದೇ ವ್ಯಾಜ್ಯ ಅಥವಾ ವಿವಾದ ಕ್ಲೇಮುಗಳನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಉಭಯ ಪಕ್ಷದವರು ಅಂತಹ ವಿವಾದವನ್ನು ಕರ್ನಾಟಕ Arbitration ಕೇಂದ್ರ (ದೇಶಿಯ, ಅಂತರ್‌ದೇಶಿಯ)ನಿಯಮಗಳು, 2012ರಡಿಯಲ್ಲಿ ನೇಮಕಗೊಂಡ ಒಬ್ಬರು ಅಥವಾ ಹಲವು ಪಂಚಾಯತ್‌ದಾರರ ಮೂಲಕ ಪರಿಹರಿಸಲು ಒಪ್ಪಿಕೊಳ್ಳಲಾಗಿದೆ.

y) ನಿಗಮದಿಂದ ಕರೆಯಲಾಗುವ ಯಾವುದೇ ಸಂಧಾನವನ್ನು ಯಾವುದೇ ಸಮಯದಲ್ಲಿ ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

z) ಸಂಧಾನಪ್ರಕಟಣೆಯನ್ನು ಯಾವುದೇ ಕಾರಣ ನೀಡದೆ ಮುಂದೂಡುವ/ಪುರಸ್ಕರಿಸುವ/ ತಿರಸ್ಕರಿಸುವ ಹಕ್ಕನ್ನು ನಿಗಮವು ಕಾಯ್ದರಿಸಿಕೊಂಡಿದೆ.

aa) ಒಂದು ವೇಳೆ ನಿಗದಿಪಡಿಸಿದ ಮಾನ್ಯತಾ ಅವಧಿಯಲ್ಲಿ ಸಂಧಾನ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಲು ಸಾಧ್ಯವಾಗದಿದ್ದಲ್ಲಿ, ಸಂಧಾನ ಮಾನ್ಯತಾ ಅವಧಿಯನ್ನು ವಿಸ್ತರಿಸುವಂತೆ ಬಿಡ್‌ದಾರರುಗಳಿಂದ ಲಿಖಿತವಾಗಿ ಸಹಮತ ಪಡೆದುಕೊಂಡು ಸಂಧಾನ ಕರೆಯುವ ಅಧಿಕಾರವನ್ನು ಪ್ರಾಧಿಕಾರಿಗಳು (Tender Inviting Authority) ಸಂಧಾನದಗಳ ಮಾನ್ಯತಾ ಅವಧಿಯನ್ನು ವಿಸ್ತರಿಸಲು ಅಧಿಕಾರ ಹೊಂದಿರುತ್ತದೆ.

bb) ಸಂಧಾನ ಬಿಡ್ ಸಲ್ಲಿಕೆ ಅವಧಿಯನ್ನು ಅವಶ್ಯಕತೆಗನುಗುಣವಾಗಿ ವಿಸ್ತರಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

cc) ಜಾಹೀರಾತು ಪ್ಯಾಕೇಜ್‌ಗೆ ಹೊಸದಾಗಿ ಆಯ್ಕೆಯಾಗುವ ಪರವಾನಗಿದಾರರಿಗೆ ಫ್ಯಾಬ್ರಿಕೇಷನ್ ಕೆಲಸಗಳಿಗಾಗಿ ಕರಾರು ಒಪ್ಪಂದದ ದಿನಾಂಕದಿಂದ 10 ದಿನಗಳ ಅವಧಿಯನ್ನು ಮಾತ್ರ ಶುಲ್ಕರಹಿತ ಅವಧಿಯೆಂದು ಪರಿಗಣಿಸಲಾಗುವುದು. ಸದರಿ ಅವಧಿಯು ಒಟ್ಟಾರೆ ಕರಾರಿನ ಅವಧಿಯೊಳಗೆ ಸೇರಿರುತ್ತದೆ.

dd) ಪರವಾನಗಿದಾರರು ಜಾಹೀರಾತುಗಳನ್ನು ಪ್ರದರ್ಶಿಸಲು ಅವಶ್ಯಕವಿರುವ ಕಾರ್ಯನಿರ್ವಹಣೆಯನ್ನು ಆಯಾ ಕ್ಷೇತ್ರದ ಏಜೆನ್ಸಿಗಳಿಂದ ಪಡೆಯಬಹುದಾಗಿರುತ್ತದೆ. ಆದರೆ ಪೂರ್ಣವಾಗಿ ಜಾಹೀರಾತು ಪ್ಯಾಕೇಜ್‌ನ್ನು ಉಪ-ಪರವಾನಗಿ ನೀಡುವಂತಿಲ್ಲ. ಪರವಾನಗಿ ಪಡೆದ ಪರವಾನಗಿದಾರರೇ ಜಾಹೀರಾತು ಪ್ಯಾಕೇಜ್‌ಗಳನ್ನು ನಿರ್ವಹಿಸುವುದು.

ee) ಪರವಾನಗಿದಾರರು ಹೋರ್ಡಿಂಗ್ಸ್ / ಗ್ಲೋಸೈನ್ ಬೋರ್ಡ್ ಇತ್ಯಾದಿಗಳ ನಿರ್ಮಾಣ / ನಿರ್ವಹಣೆಯ ಸಂದರ್ಭದಲ್ಲಿ ಕಾರ್ಯನಿಮಿತ್ತ ಸಿಬ್ಬಂದಿಗಳಿಗೆ / ಸಾರ್ವಜನಿಕ ಪ್ರಯಾಣಿಕರಿಗೆ ಹಾಗೂ ಸಂಸ್ಥೆಯ ಆಸ್ತಿ-ಪಾಸ್ತಿಗಳಿಗೆ ಧಕ್ಕೆಯುಂಟಾದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಮತ್ತು ಸರ್ಕಾರ ಜಾರಿಗೊಳಿಸಬಹುದಾದ ಎಲ್ಲಾ ಕಾನೂನು ನಿಯಮಗಳಡಿ ಪರವಾನಗಿದಾರರೇ ಹೊಣೆಗಾರರಾಗಿರುತ್ತಾರೆ.

ff) ನಿಗಮದ ನಿಲ್ದಾಣಗಳಲ್ಲಿ, ಘಟಕಗಳಲ್ಲಿ ಅಥವಾ ಇನ್ನಾವುದೇ ಸ್ಥಳಗಳಲ್ಲಿ ಗೋಡೆ ಬರಹಗಳಿಗೆ ಅವಕಾಶವಿರುವುದಿಲ್ಲ.

gg) ಪರವಾನಗಿದಾರರು ಕರಾರಿನ ಅವಧಿ ಮುಗಿಯುವ ದಿನ ಮಳಿಗೆಯನ್ನು/ತೆರೆದ ಸ್ಥಳಗಳಲ್ಲಿ ಸ್ಟ್ರಕ್ಚರ್‌ಗಳನ್ನು ತೆರವುಗೊಳಿಸಲು ವಿಳಂಭ ಮಾಡಿದ್ದಲ್ಲಿ ನಿಗಮವು ತೆಗೆದುಕೊಳ್ಳುವ ಕ್ರಮ:-

| ಕ್ರ.ಸಂ | ವಿಳಂಬದ ದಿನಗಳು | ವಿಧಿಸಬೇಕಿರುವ ದಂಡದ ಮೊತ್ತ ಶೇ. ವಾರು |
|---|---|---|
| 1 | ತೆರೆದ ಸ್ಥಳಗಳಲ್ಲಿನ (Structure) ಸ್ಟ್ರಕ್ಚರ್‌ನ್ನು ತೆರವು ಗೊಳಿಸಲು 07 ದಿನಗಳವರೆಗಿನ ವಿಳಂಬಕ್ಕೆ | ಕೊನೆಯ ಅಂತಿಮಗಳ ಪರವಾನಗಿ ಶುಲ್ಕದ ಶೇ.25 ರಷ್ಟು ದಂಡ ಮತ್ತು ಅನ್ವಯಿಸುವ ತೆರಿಗೆಗಳನ್ನು ವಿಧಿಸಲಾಗುವುದು. |
| 2 | ತೆರೆದ ಸ್ಥಳಗಳಲ್ಲಿನ (Structure) ಸ್ಟ್ರಕ್ಚರ್‌ನ್ನು ತೆರವು ಗೊಳಿಸಲು 07 ದಿನಗಳ ಮೇಲ್ಪಟ್ಟು, 15 ದಿನಗಳವರೆಗಿನ ವಿಳಂಬಕ್ಕೆ | ಕೊನೆಯ ತಿಂಗಳ ಪರವಾನಗಿ ಶುಲ್ಕದ ಶೇ.50 ರಷ್ಟು ದಂಡ ಮತ್ತು ಅನ್ವಯಿಸುವ ತೆರಿಗಳನ್ನು ವಿಧಿಸಲಾಗುವುದ. |
| 3 | ತೆರೆದ ಸ್ಥಳಗಳಲ್ಲಿನ (Structure) ಸ್ಟ್ರಕ್ಚರ್‌ನ್ನು ತೆರವುಗೊಳಿಸಲು 15 ದಿನಗಳ ಮೇಲ್ಪಟ್ಟು, ಒಂದು ತಿಂಗಳವರೆಗಿನ ವಿಳಂಬಕ್ಕೆ | ಕೊನೆಯ ತಿಂಗಳ ಪೂರ್ಣ ಪರವಾನಗಿ ಶುಲ್ಕದಷ್ಟು ದಂಡ ಮತ್ತು ಅನ್ವಯಿಸುವ ತೆರಿಗೆಗಳು |

hh) ಒಂದು ತಿಂಗಳೊಳಗಾಗಿ ಮಳಿಗೆಯಲ್ಲಿನ ವಸ್ತುಗಳನ್ನು ಹಾಗೂ ತೆರೆದ ಸ್ಥಳಗಳಲ್ಲಿನ (Structure) ಸ್ಟ್ರಕ್ಚರ್‌ನ್ನು ತೆರವುಗೊಳಿಸಲು ವಿಫಲರಾದಲ್ಲಿ ಅವುಗಳನ್ನು ಮುಟ್ಟುಗೋಲು ಹಾಕಿಕೊಂಡು ಪರವಾನಿಗೆದಾಶರರ ಖರ್ಚಿನಲ್ಲಿ ತೆರವುಗೊಳಿಸಲು/ವಿಲೇವಾರಿ ಮಾಡಲು ನಿಗಮದ ವತಿಯಿಂದ ಕ್ರಮಕೈಗೊಳ್ಳಲಾಗುವುದು.

ii) ತೆರೆದ ಸ್ಥಳಗಳಲ್ಲಿನ (Structure) ಸ್ಟ್ರಕ್ಚರ್ ತೆರವುಗೊಳಿಸಿರುವುದನ್ನು ಖಚಿತಪಡಿಸಿಕೊಂಡು, ಬರಬೇಕಾಗಿರುವ ಬಾಕಿ ಮೊತ್ತವನ್ನು ಹೊಂದಾಣಿಕೆ ಮಾಡಿದ ನಂತರ, ಭದ್ರತಾ ಠೇವಣಿಯನ್ನು ಹಿಂದಿರುಗಿಸಲಾಗುವುದು.

ಸಹಿ/-

ವಿಭಾಗೀಯ ನಿಯಂತ್ರಣಾಧಿಕಾರಿ.
ಕ.ರಾ.ರ.ಸಾ.ನಿಗಮ: ಮಂಡ್ಯ ವಿಭಾಗ.

ಗೌರವ ಪೂರ್ವಕವಾಗಿ ಪ್ರತಿಯನ್ನು:-

1. ಮುಖ್ಯ ಸಂಚಾರ ವ್ಯವಸ್ಥಾಪಕರು, ಕೇಂದ್ರ ಕಛೇರಿ, ಬೆಂಗಳೂರುರವರಿಗೆ ಹಾಗೂ ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿರವರಿಗೆ ಮಾಹಿತಿಗಾಗಿ.
2. ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿ, ವಾ.ಕ.ರ.ಸಾ.ನಿ, ಈ.ಕ.ರ.ಸಾ.ನಿ, ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.

ಪ್ರತಿಯನ್ನು:-

1. ಘಟಕ ವ್ಯವಸ್ಥಾಪಕರು ಮಂಡ್ಯ, ಮದ್ದೂರು, ಮಳವಳ್ಳಿ, ನಾಗಮಂಗಲ, ಕೆ,ಆರ್.ಪೇಟೆ ಹಾಗೂ ಪಾಂಡವಪುರ ಇವರ ಮಾಹಿತಿಗಾಗಿ ಹಾಗೂ ಸದರಿ ಪ್ರತಿಯನ್ನು ಘಟಕದ & ಬಸ್ ನಿಲ್ದಾಣದ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಲು ಸೂಚಿಸಲಾಗಿದೆ. ಎಲ್ಲಾ ಘಟಕ ವ್ಯವಸ್ಥಾಪಕರುಗಳ ಮಾಹಿತಿಗಾಗಿ ಕಳುಹಿಸಲಾಗಿದೆ.
2. ವಿಭಾಗೀಯ ಸಂಚಲನಾಧಿಕಾರಿ/ಸಹಾಯಕ ಕಾನೂನು ಅಧಿಕಾರಿ/ ಭದ್ರತಾ & ಜಾಗೃತಾಧಿಕಾರಿ/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ಸಹಾಯಕ ಲೆಕ್ಕಾಧಿಕಾರಿ, ಮಂಡ್ಯ ವಿಭಾಗರವರ ಮಾಹಿತಿಗಾಗಿ ಮತ್ತು ಸಂಧಾನ ನಡೆಯುವ ಸಮಯದಲ್ಲಿ ಹಾಜರಿರಲು ತಿಳಿಸಲಾಗಿದೆ.